**ಶ್ರೀ ಕೃಷ್ಣ ಬೈರೇಗೌಡ.** ನನ್ನದು duty ಇರುವುದು ಅಲ್ಲಿಯೇ ಹಾಗಾಗಿ, ಮಾನ್ಯ ಕಾನೂನು ಸಚಿವರು ನನ್ನ ಪರವಾಗಿ ಮಂಡಿಸಲು ಹೊರಟಿದ್ದರು.

**ಅಧ್ಯಕ್ಷರು:** ಚರ್ಚೆ ಬೇಡ.

**ಶ್ರೀ ಕೆ.ಆರ್.ರಮೇಶ್ ಕುಮಾರ್:** ದೇಶಪಾಂಡೆಯವರು ಆ ಸದನದಲ್ಲಿ ದ್ದಾರೆಯೇ?

**ಅಧ್ಯಕ್ಷರು:** Letter ಕೊಟ್ಟಿದ್ದಾರೆ.

**ಶ್ರೀ ಕೆ.ಆರ್.ರಮೇಶ್ ಕುಮಾರ್:** ಮತ್ತೆ ನಮಗೆ ಗೊತ್ತಾಗಬೇಕಲ್ಲವೇ?

**ಅಧ್ಯಕ್ಷರು:** ಆಯಿತು, ಸಾಕು.

**ಶ್ರೀ ಉಮೇಶ್ ವಿ ಕತ್ತಿ:** ಮಾನ್ಯ ಮಂತ್ರಿಗಳು ಇಲ್ಲಿ ಇದ್ದಾರೋ? ಬೆಂಗಳೂರಿನಲ್ಲಿದ್ದಾರೋ?

**ಶ್ರೀ ಟಿ.ಬಿ.ಜಯಚಂದ್ರ:** ಇಲ್ಲೇ ಇದ್ದಾರೆ.

**ಶ್ರೀ ಉಮೇಶ್ ವಿ.ಕತ್ತಿ:**ನಮಗಲ್ಲ. ರಮೇಶ್ ಕುಮಾರ್‌ರವರು ಕೇಳುತ್ತಿದ್ದರು.

**ಶ್ರೀ ಬಿ.ರಮಾನಾಥ ರೈ(ಅರಣ್ಯ ಸಚಿವರು):** ಮಂತ್ರಿಯಾಗಿದ್ದಾಗ ಸದನದಲ್ಲಿಯೇ ಇದ್ದೇವೆ.

**ಅಧ್ಯಕ್ಷರು:** ಈಗ ಪ್ರಶ್ನೋತ್ತರ. ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು. ಮೊದಲನೇ ಪಟ್ಟಿ.

(ಗೊಂದಲ)

**ವಿಷಯ: ಕಬ್ಬಿನ ಬೆಲೆ ನಿಗದಿಪಡಿಸುವ ಬಗ್ಗೆ**

**5. ನಿಲುವಳಿ ಸೂಚನೆ ತೆಗೆದುಕೊಳ್ಳಲು ಮನವಿ.**

**ಅಧ್ಯಕ್ಷರು:** ಆ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರೆ, ಪ್ರಶ್ನೆ ಗಳಾದ ಮೇಲೆ ರೇವಣ್ಣನವರೆ, ದಯವಿಟ್ಟು ಪ್ರಶ್ನೋತ್ತರ ಆಗಲಿ

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:** ಸರ್ಕಾರ ಅಧಿಸೂಚನೆ ಹೊರಡಿಸಿದೆ.

**ಶ್ರೀ ಹೆಚ್ ಡಿ.ರೇವಣ್ಣ:** ಮಾನ್ಯ ಸಭಾಧ್ಯಕ್ಷರೆ, ನಿಲುವಳಿ ಸೂಚನೆ ಇದೆ.

(ಗೊಂದಲ)

**ಅಧ್ಯಕ್ಷರು:** ಪ್ರಶ್ನೋತ್ತರ ಆಗಲಿ.

(ಗೊಂದಲ)

**ಅಧ್ಯಕ್ಷರು:** ಪ್ರಶ್ನೋತ್ತರವಾದ ಮೇಲೆ ತೆಗೆದುಕೊಳ್ಳೋಣ ದಯವಿಟ್ಟು, ಪ್ರಶ್ನೆಗಳಿಗೆ ಅವಕಾಶ ಕೊಡಿ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್ :** ನಿಲುವಳಿ ಸೂಚನೆ ಇದೆ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** ಪ್ರಶ್ನೋತ್ತರವನ್ನು ಬದಿಗೊತ್ತಿ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕು

(ಗೊಂದಲ)

**ಶ್ರೀ ಎನ್. ಚಲುವರಾಯಸ್ವಾಮಿ:** ರೈತರ ಸಮಸ್ಯೆ ಬಗ್ಗೆ ಚರ್ಚಿಸಲು ತಾವು ಅವಕಾಶ ಕೊಡಬೇಕು

(ಗೊಂದಲ)

**ಶ್ರೀ ಹೆಚ್.ಡಿ.ರೇವಣ್ಣ:** ನಿಯಮ 60ರ ಮೇರೆಗೆ ಸೂಚನೆ ಕೊಟ್ಟಿದ್ದೇವೆ.

(ಗೊಂದಲ)

**ಅಧ್ಯಕ್ಷರು:** ಪ್ರಶ್ನೋತ್ತರವಾಗಲಿ ಮೊದಲನೇ ದಿವಸವೇ ಹೀಗಾದರೆ

ಹೇಗೆ?

(ಗೊಂದಲ)

(ಈ ಹಂತದಲ್ಲಿ ಜೆ.ಡಿ.(ಎಸ್)ನ ಕೆಲವು ಸದಸ್ಯರು ಮತ್ತು ಬಿ.ಜೆ.ಪಿ ಯ ಕೆಲವು ಸದಸ್ಯರು, ಶ್ರೀ ಬಿ.ಎಸ್ ಯಡಿಯೂರಪ್ಪ ಮತ್ತು ಶ್ರೀ ಬಿ.ಶ್ರೀರಾಮುಲುರವರು ಸದನದ ಬಾವಿಗೆ ಬಂದರು)

(ಗೊಂದಲ)

**ಅಧ್ಯಕ್ಷರು:** ಒಂದು ನಿಮಿಷ ಕೇಳಿ. ನಿಮಗೆ ನಾನು ಚರ್ಚೆಗೆ ಸಂಪೂರ್ಣವಾಗಿ ಅವಕಾಶವನ್ನು ಮಾಡಿಕೊಡುತ್ತೇನೆ. ಪ್ರಶ್ನೋತ್ತರವಾಗಲಿ.

(ಗೊಂದಲ)

**ಅಧ್ಯಕ್ಷರು:** ಇದು ಜನರ ಸಮಸ್ಯೆ ಖಂಡಿತ ರೇವಣ್ಣವರೆ, ಕೇಳಿ. ರೈತರ ವಿಚಾರದಲ್ಲಿ ಎಷ್ಟೇ ಚರ್ಚೆ ಮಾಡಿದರೂ ಸಂಪೂರ್ಣವಾದ ಅವಕಾಶವಿದೆ

(ಗೊಂದಲ)

**ಅಧ್ಯಕ್ಷರು:** ಈ ಸದನ ಇರುವುದೇ ಚರ್ಚೆಗಾಗಿ, ಚರ್ಚೆ ಮುಖಾಂತರ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕಾಗಿ.

(ಗೊಂದಲ)

**ಅಧ್ಯಕ್ಷರು:** ನೀವು ಪ್ರಸ್ತಾಪಿಸುತ್ತಿರುವುದು ರೈತರ ಸಮಸ್ಯೆ. ಸಂಪೂರ್ಣವಾಗಿ, ಒಂದು ದಿವಸ ಅಲ್ಲ, ಎರಡು ದಿವಸ ಚರ್ಚೆ ಮಾಡೋಣ.

(ಗೊಂದಲ)

**ಅಧ್ಯಕ್ಷರು:** ಖಂಡಿತ ಮಾಡೋಣ.ನಿಮ್ಮ ಸಮಸ್ಯೆಗಳನ್ನು ಬಗೆಹರಿಸಲು ಚರ್ಚೆ ಮಾಡೋಣ. ದಯವಿಟ್ಟು ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

**ಅಧ್ಯಕ್ಷರು:** ಸಮಸ್ಯೆ ಆಗುವುದಿಲ್ಲ. ಕೆಟ್ಟ ಸಂಪ್ರದಾಯವನ್ನು ಸ್ಥಾಪನೆ ಮಾಡುವುದು ಬೇಡ ಪ್ರಶ್ನೋತ್ತರವಾದ ಮೇಲೆ ಚರ್ಚೆ ಮಾಡುವುದಕ್ಕೆ ಸಂಪೂರ್ಣ ಅವಕಾಶ ಇದೆ, ನಾನು ಮಾಡಿಕೊಡುತ್ತೇನೆ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** ಪ್ರಶ್ನೋತ್ತರವನ್ನು ಬದಿಗೊತ್ತಿ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ, ನಿಲುವಳಿ ಸೂಚನೆ ಯನ್ನು ತೆಗೆದುಕೊಳ್ಳಬೇಕು

(ಗೊಂದಲ)

**ಅಧ್ಯಕ್ಷರು:** ನಾವಿಲ್ಲಿ ಸದನ ಸೇರಿದ್ದೇವೆ. ಉತ್ತಮವಾದ ಚರ್ಚೆಯಾಗ ಬೇಕು ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯಬೇಕು. ಈ ಸದನ ಇರುವುದೇ ಅದಕ್ಕೆ, ಅದಕ್ಕೋಸ್ಕರ ಅವಕಾಶಮಾಡಿಕೊಡಿ. ಪ್ರಶ್ನೋತ್ತರವಾಗಲಿ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:** Question Hour ಅನ್ನು ಬದಿಗೊತ್ತಿ ತೆಗೆದುಕೊಳ್ಳಿ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** ಪ್ರಶ್ನೋತ್ತರವನ್ನು ಬದಿಗೊತ್ತಿರುವಂಥ ನೂರಾರು ಉದಾಹರಣೆಗಳಿವೆ. ತಾವು ರಾಜ್ಯದ ಕಬ್ಬು ಬೆಳೆಗಾರರ ಸಮಸ್ಯೆ ಯನ್ನು ರೈತರ ಹಿತದೃಷ್ಟಿಯಿಂದ ಚರ್ಚೆಗೆ ಮೊದಲು ತೆಗೆದುಕೊಳ್ಳಿ. ನಾವು ರೈತರ ಪರವಾಗಿ ಇದ್ದೇವೆ ಎನ್ನುವ ಸಂದೇಶವನ್ನು ಕಳುಹಿಸಿಕೊಡಬೇಕು.

**ಶ್ರೀ ಜಗದೀಶ್ ಶೆಟ್ಟರ್:** ರೈತರು ಹೋರಾಟ ಮಾಡುತ್ತಿದ್ದಾರೆ, ಕಬ್ಬು ಬೆಳೆಗಾರರು ಸಂಕಷ್ಟದಲ್ಲಿದ್ದಾರೆ.

(ಗೊಂದಲ)

**ಅಧ್ಯಕ್ಷರು:** ಯಡಿಯೂರಪ್ಪನವರೆ, ನೀವು ಅಲ್ಲಿ ಏನೇ ಮಾತನಾಡಿದರೂ ಅಲ್ಲಿಗೆ ಹೋಗುವುದಿಲ್ಲ, ಹೊರಗಡೆ ಬರುವುದಿಲ್ಲ. ನಿಮಗೆ ಸಂಪೂರ್ಣ ಅವಕಾಶ ಕೊಡುವಂಥ ವ್ಯವಸ್ಥೆಯನ್ನು ನಾನು ಮಾಡಿಕೊಡಬೇಕಾದರೆ ಏಕೆ ಹೀಗೆ? ಇಲ್ಲಿ ಹೇಳುವುದರಿಂದ ಏನೂ ಪ್ರಯೋಜನವಿಲ್ಲ ಆ ಸ್ಥಾನದಲ್ಲಿ ಕುಳಿತು ಚರ್ಚೆ ಮಾಡಿದರೆ ಅದಕ್ಕೆ ಸಿಗುವ ಗೌರವ, ಅದಕ್ಕೆ ಸಿಗುವ ಮಹತ್ವ ಈ ರೀತಿ ಬಾವಿಯಲ್ಲಿ ಕುಳಿತು ಮಾತನಾಡುವುದರಿಂದ ಏನೂ ಇಲ್ಲ

(ಗೊಂದಲ)

**ಅಧ್ಯಕ್ಷರು:** ಮೊದಲನೇ ದಿವಸ ಒಳ್ಳೆಯ ಚರ್ಚೆ ಮಾಡೋಣ

(ಗೊಂದಲ)

**ಅಧ್ಯಕ್ಷರು:** ದಯವಿಟ್ಟು ನೀವು ಅಲ್ಲಿ ನಿಂತುಕೊಂಡು ಏನೂ ಮಾತ ನಾಡಬೇಡಿ. ಅದಕ್ಕೆ ಅರ್ಥವಿಲ್ಲ. ಅಲ್ಲಿ ಮಾತನಾಡುವುದಕ್ಕೆ ಅವಕಾಶವೂ ಇಲ್ಲ ಅದೂ ದಾಖಲೆಗೂ ಬರುವುದಿಲ್ಲ. ನಾನು ಈಗಲೇ ಹೇಳಿಬಿಡುತ್ತೇನೆ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:** ಮೊದಲು ನಿಲುವಳಿ ಸೂಚನೆಯಲ್ಲಿ ಚರ್ಚೆಯಾಗಬೇಕು.

(ಗೊಂದಲ)

**ಅಧ್ಯಕ್ಷರು:** ಚರ್ಚೆ ಮಾಡಿ, ಮಾತನಾಡಿ ಏಕೆ ಈ ರೀತಿ ಮಾಡು ತ್ತೀರಿ?

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:** ತಾವು ಚರ್ಚೆ ಮಾಡುವುದಕ್ಕೆ allow ಮಾಡಿ ಸರ್. ನಿಲುವಳಿ ಸೂಚನೆ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

**ಅಧ್ಯಕ್ಷರು:** ನೀವು ನಿಲುವಳಿ ಸೂಚನೆ ತೆಗೆದುಕೊಂಡಾಗ ಅಲ್ಲಿ ಕುಳಿತು ಕೊಂಡು ಹೇಳಿ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:** ನಿಲುವಳಿ ಸೂಚನೆಗೆ ತಾವು ದಯವಿಟ್ಟು ಅವಕಾಶ ಕೊಡಿ

(ಗೊಂದಲ)

**ಅಧ್ಯಕ್ಷರು:** ನಾನು ನಿಮಗೆ ಭರವಸೆ ಕೊಡುತ್ತೇನೆ. ಮೊದಲು ನೀವು ಎಲ್ಲರೂ ಹೋಗಿ ಅಲ್ಲಿ ಕುಳಿತುಕೊಳ್ಳಿ. ಪ್ರಶ್ನೋತ್ತರ ವೇಳೆ ಮುಗಿದ ನಂತರ ಖಂಡಿತ ಚರ್ಚೆಗೆ ಅವಕಾಶ ಕೊಡುತ್ತೇನೆ

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:** ಸನ್ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಸಂಕಷ್ಟಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ದಯವಿಟ್ಟು ಅವಕಾಶ ಕೊಡಿ.

**ಅಧ್ಯಕ್ಷರು:** ನೀವು ಚರ್ಚೆನೇ ಮಾಡಿಲ್ಲ, ಸರ್ಕಾರ ಉತ್ತರ ಹೇಳಿಲ್ಲ, ಏನು ಸ್ಪಂದಿಸುವುದು? ನೀವು ಅಲ್ಲಿ ಕುಳಿತು ಚರ್ಚೆ ಮಾಡಿ ಯಾರು ಬೇಡ ಎನ್ನುತ್ತಾರೆ

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:** ಕಬ್ಬು ಬೆಳೆಗಾರರು ಸಂಕಷ್ಟದಲ್ಲಿದ್ದಾರೆ, ಜನಪ್ರತಿನಿಧಿಗಳು ರಸ್ತೆಯಲ್ಲಿ ಓಡಾಡುವುದಕ್ಕಾಗುತ್ತಿಲ್ಲ ಕಬ್ಬು ಬೆಳೆಗಾರರಿಗೆ ನ್ಯಾಯ ಒದಗಿಸಿಕೊಡಿ.

(ಗೊಂದಲ)

**ಅಧ್ಯಕ್ಷರು:** No, no ಸನ್ಮಾನ್ಯ ಶೆಟ್ಟರ್‌ರವರೆ, ಅಲ್ಲಿ ನಿಂತುಕೊಂಡು ಮಾತನಾಡಬೇಡಿ

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್** : ನಿಲುವಳಿ ಸೂಚನೆಗೆ ಅವಕಾಶ ಕೊಡಿ

(ಗೊಂದಲ)

**ಅಧ್ಯಕ್ಷರು:** ಈಗ ಆಗುವುದಿಲ್ಲ ನಾನು ನಿಮಗೆ ಕೈ ಮುಗಿದು ಕೇಳುತ್ತೇನೆ, ದಯವಿಟ್ಟು ನಿಮ್ಮ ನಿಮ್ಮ ಸ್ಥಾನಕ್ಕೆ ಹೋಗಿ. ಚರ್ಚೆಗೆ ಅವಕಾಶ ಮಾಡಿ ಕೊಡುತ್ತೇವೆ ಅಲ್ಲವೆ? ಅದಕ್ಯಾಕೆ ಹೀಗೆ ಮಾಡುತ್ತೀರಿ.

(ಗೊಂದಲ)

**ಅಧ್ಯಕ್ಷರು:** ಇದರಿಂದ ಯಾವ ಸಾಧನೆಯೂ ಆಗುವುದಿಲ್ಲ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:** ಮೊದಲು ನಿಲುವಳಿ ಸೂಚನೆಯಲ್ಲಿ ಚರ್ಚೆಯಾಗಲಿ.

(ಗೊಂದಲ)

**ಅಧ್ಯಕ್ಷರು:** ಚಲುವರಾಯ ಸ್ವಾಮಿಯವರೆ ನೀವು ಇಲ್ಲಿಗೆ ಬಂದಿರಾ?

(ಗೊಂದಲ)

(ಸದನದ ಬಾವಿಯಲ್ಲಿದ್ದ ಸದಸ್ಯರು ಘೋಷಣೆಗಳನ್ನು ಕೂಗುತ್ತಿದ್ದರು)

**ಅಧ್ಯಕ್ಷರು** : ಯಾವುದೂ ದಾಖಲೆಗೆ ಹಾಕಬೇಡಿ.

(ಗೊಂದಲ)

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ನಡಾವಳಿ ದಾಖಲಿಸಬೇಡಿ ಎಂದು ಆದೇಶಿಸಿದರು )

(ಗೊಂದಲ)

**ಶ್ರೀ ಪ್ರಶಾಂತ್ ಬಿ.ಹುಕ್ಕೇರಿ** . ಸನ್ಮಾನ್ಯ ಅಧ್ಯಕ್ಷರೆ,

(ಗೊಂದಲ)

**ಅಧ್ಯಕ್ಷರು :** ರೀ ಪ್ರಕಾಶ್‌ರವರೆ, ನೀವು ಏಕೆ ಎದ್ದು ನಿಲ್ಲುತ್ತೀರಿ?

(ಗೊಂದಲ)

**ಅಧ್ಯಕ್ಷರು:** ಈಗ ನೀವು ಪ್ರಸ್ತಾಪಿಸಿದ ವಿಷಯಗಳು ಪ್ರಮುಖವಾಗಿವೆ ಸಂಪೂರ್ಣ ಚರ್ಚೆಗೆ ಅವಕಾಶ ಕೊಟ್ಟರೆ ಅದಕ್ಕೆ ಉತ್ತರ ಸಿಗುತ್ತದೆ, ಪರಿಹಾರವೂ ಸಿಗುತ್ತದೆ ಇಲ್ಲಿ ನಿಂತುಕೊಂಡು ಮಾತನಾಡಿದರೆ ಏನು ಪ್ರಯೋಜನ? ಶಾಸನ ಸಭೆಯ ಲಕ್ಷಣವೆ? ಈ ಸಭೆಗೆ ಎಲ್ಲರೂ ಬಂದಿದ್ದೀರಿ ಎಲ್ಲರೂ ಈ ವಿಚಾರ ತಿಳಿದುಕೊಳ್ಳಿ ಇದು ಅಂತಿಮವಾಗಿ ಬಳಸತಕ್ಕಂಥ ಅಸ್ತ್ರವೇ ಸಹ ಈ ಸದನದ ಬಾವಿಯಲ್ಲಿ ಕುಳಿತುಕೊಂಡು ಪರಿಹಾರ ಕಂಡು ಹಿಡಿಯುತ್ತೇವೆಂದರೆ ಆ ಭಗವಂತನೇ ಕಾಪಾಡಬೇಕು. ಚರ್ಚೆ ಮಾಡಿ ಚರ್ಚೆಯಿಂದ ಸರ್ಕಾರವನ್ನು ಒಲಿಸಿಕೊಳ್ಳಿ, ಆಗ ಸರ್ಕಾರದಿಂದ ಉತ್ತರ ಪಡೆಯಿರಿ. ಆಗ ಸರಿಯಾಗುತ್ತದೆ.

(ಗೊಂದಲ)

(ಈ ಹಂತದಲ್ಲಿ ಶ್ರೀ ಬಸವರಾಜ ರಾಯರೆಡ್ಡಿಯವರು ನಿಯಾಮವಳಿ ಪುಸ್ತಕವನ್ನು ಪ್ರದರ್ಶನ ಮಾಡುತ್ತಾ ಸದನದ ಬಾವಿಗೆ ಬಂದರು).

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್ :** ನೋಡಿ ಮಾನ್ಯ ರಾಯರೆಡ್ಡಿಯವರೂ ಕೂಡ ಸದನದ ಬಾವಿಗೆ ಬಂದಿದ್ದಾರೆ, ರಾಯರೆಡ್ಡಿಯವರ ಬೆಂಬಲ ಇದೆ.

(ಗೊಂದಲ)

**ಅಧ್ಯಕ್ಷರು :** ರೀ ರಾಯರೆಡ್ಡಿಯವರೆ, please ನಿಮ್ಮ ಸ್ಥಾನಕ್ಕೆ ಹೋಗಿ. ರೀ Chief Whip ರವರೆ, ಸ್ವಲ್ಪ ನೋಡಿಕೊಳ್ಳಿ.

(ಗೊಂದಲ)

(ಈ ಹಂತದಲ್ಲಿ ಶ್ರೀ ಬಸವರಾಜ ರಾಯರೆಡ್ಡಿಯವರು ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

(ಗೊಂದಲ)

**ಅಧ್ಯಕ್ಷರು:** ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಳ್ಳೋಣ. ರೀ ದತ್ತರವರೆ ನೀವು ಹಾಗೆ ಮಾಡುತ್ತೀರಲ್ಲ? ಮೊದಲು ಪ್ರಶ್ನೋತ್ತರ ವೇಳೆ ಯಾಗಲಿ ಎಂದರೆ ಹೀಗೆ ಮಾಡಿದರೆ ಹೇಗೆ? ರೀ, ಈ ರೀತಿ ಮಾಡಿದರೆ bad precedent ಆಗುತ್ತದೆ. ನೀವೇನು ಸರ್ಕಾರ ನಡೆಸಿಲ್ಲವೆ? ನೀವು ಎಂಥವರು? ಪ್ರಶ್ನೋತ್ತರ ವೇಳೆಯನ್ನು ಪೂರೈಸಿಕೊಂಡು ನಾನು ಬರುತ್ತೇನೆಂದು ಹೇಳುತ್ತಿದ್ದೇನೆ, ಆದರೂ ನೀವು ಹೀಗೆ ಮಾಡಿದರೆ ಹೇಗೆ? Bad precedent ಆಗುವುದಿಲ್ಲವೆ? ನೀವು ಸ್ವಲ್ಪ ತೆಗೆದು ನೋಡಿ ಅಯ್ಯೋ ರಾಮನೆ! ನೋಡಿ ನೀವು ಚರ್ಚೆ ಮಾಡುವ ವಿಚಾರದಲ್ಲಿ ನನ್ನ ಸಹಮತ ಇದೆ. ಪ್ರಶ್ನೋತ್ತರ ವೇಳೆಯನ್ನು ಮುಂದೂಡಿ ಚರ್ಚೆ ಮಾಡುವಂಥದ್ದು ಕೆಟ್ಟ ಸಂಪ್ರದಾಯ ವಾಗುತ್ತದೆ. ಸಾಕು ಸುಮ್ಮನಿರಿ

(ಗೊಂದಲ)

**ಅಧ್ಯಕ್ಷರು:** ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ ಆಗ ಮಾತನಾಡಿ. ಮೊದಲು ಪ್ರಶ್ನೋತ್ತರ ವೇಳೆಯನ್ನು ಪೂರೈಸಿಕೊಳ್ಳಿ, ಕೆಟ್ಟ ಸಂಪ್ರದಾಯ ಮಾಡಬೇಡಿ. ನಾನು ಅದನ್ನು ಮಾಡಿರುವುದಿಲ್ಲ. ಹಿಂದಿನವರು ಮಾಡಿಟ್ಟಿರುವು ದನ್ನು ನಾವು ಅನುಸರಿಸಿಕೊಂಡು ಹೋಗಬೇಕೆ ಬೇಡವೆ? ಏನು ಮನಸ್ಸಿಗೆ ಬಂದ ಹಾಗೆ ಮಾಡುವುದೆ?

(ಗೊಂದಲ)

**ಅಧ್ಯಕ್ಷರು :** ನೋಡಿ ಕೆಟ್ಟ ಸಂಪ್ರದಾಯ ಬೇಡ. ಸದನದಲ್ಲಿ ಹಿಂದೆ ತೀರ್ಮಾನವಾಗಿವೆ. ಯಾವ್ಯಾವ ಸಂದರ್ಭದಲ್ಲಿ ಪ್ರಶ್ನೋತ್ತರ ವೇಳೆಯನ್ನು ಮೂಂದೂಡಿ ಚರ್ಚೆ ಮಾಡಬೇಕೆಂಬುದರ ಬಗ್ಗೆ ಲೋಕಸಭೆಯಲ್ಲಿಯೂ ತೀರ್ಮಾನವಾಗಿವೆ ಖಂಡಿತವಾಗಿಯೂ ನಿಮಗೆ ಚರ್ಚೆ ಮಾಡುವುದಕ್ಕೆ

ಅವಕಾಶ ಕೊಡುತ್ತೇನೆ.ಒಂದಲ್ಲ ಎರಡು ಸಾರಿ ಮಾಡೋಣ. ನಾನು ಅವರಿಗೆ ಮನವಿ ಮಾಡುತ್ತೇನೆ ಸದನದಲ್ಲಿ ಆ ಬಗ್ಗೆ ಚರ್ಚೆ ಮಾಡೋಣ ಸರ್ಕಾರ ತೆರದ ಮನಸ್ಸಿನಿಂದ ಉತ್ತರ ಕೊಡುತ್ತದೆ, ನಿಮಗೆ ಪರಿಹಾರ ಸಿಕ್ಕಿದರೆ ಅದಕ್ಕಿಂತಲೂ ಇನ್ಯಾವುದನ್ನು ನೀವು ಪ್ರಾರ್ಥಿಸಬೇಕು

(ಗೊಂದಲ)

**ಶ್ರೀ ಆರ್.ಅಶೋಕ** ಸರ್ಕಾರ ಒಪ್ಪಿಕೊಳ್ಳುತ್ತದೆ. ತಾವು ಅನೌನ್ಸ್ ಮಾಡಿ.

(ಗೊಂದಲ)

**ಅಧ್ಯಕ್ಷರು** : ಎಲ್ಲಿದೆ ತೋರಿಸಿರಿ?

(ಗೊಂದಲ)

**ಅಧ್ಯಕ್ಷರು** : ಸ್ವಾಮಿ ನೀವೆಲ್ಲಾ ಈ ಸದನದ ಹಿರಿಯ ಸದಸ್ಯರಾಗಿದ್ದೀರಿ ನೋಡಿ ನೀವು deep ಆಗಿ ಹೋಗಬೇಡಿ. ನಿಮ್ಮ ಕಳಕಳಿ ನನಗೆ ಅರ್ಥವಾಗುತ್ತದೆ. ಈ ಸದನದಲ್ಲಿರುವ ಪ್ರತಿಯೊಬ್ಬರಿಗೂ ಅರ್ಥವಾಗುತ್ತದೆ ಆದರೆ, ಇಲ್ಲಿ ಈಗಾಗಲೇ ಹಾಕಿರುವ ಸಂಪ್ರದಾಯನ್ನು ಮುರಿಯಬೇಡಿ.

(ಗೊಂದಲ)

**ಶ್ರೀ ಆರ್.ಅಶೋಕ** ರೈತರ ಮುಂದೆ ಯಾವ ಸಂಪ್ರದಾಯವೂ ಇಲ್ಲ. ಹಿಂದೆ ತೆಗೆದುಕೊಂಡಿರುವ ಉದಾಹರಣೆಗಳಿವೆ.

(ಗೊಂದಲ)

**ಅಧ್ಯಕ್ಷರು** : ಮೊದಲು ಪ್ರಶ್ನೋತ್ತರ ವೇಳೆ ಮುಗಿಯಲಿ ಅವರು ಉತ್ತರ ಕೊಡದಿದ್ದರೆ, ಖಂಡಿತವಾಗಿ ನಿಮಗೆ ಹೇಳುತ್ತೇನೆ ಅವರು ಉತ್ತರ ಹೇಳದಿದ್ದರೆ ಆಮೇಲೆ ನೀವು ಹೇಳಿ.

(ಗೊಂದಲ)

**ಅಧ್ಯಕ್ಷರು:** ಒಂದು ಮಾತನ್ನು ಹೇಳುತ್ತೇನೆ ದಯವಿಟ್ಟು ತಿಳಿದುಕೊಳ್ಳಿ ಈ ಸದನ ಸೇರುವುದೇ ಅಪರೂಪವಾಗಿದೆ. ಆದ್ದರಿಂದ, ಈ ಅಪರೂಪದ ಅವಕಾಶವನ್ನು ಕಳೆದುಕೊಳ್ಳಬೇಡಿ. ದಯವಿಟ್ಟು ಎಲ್ಲರೂ ಚರ್ಚೆ ಮಾಡಿ. ಈ ವಿಷಯದ ಬಗ್ಗೆ ಒಂದಲ್ಲ ಎರಡು ದಿವಸ ಚರ್ಚೆ ಮಾಡಿ

(ಗೊಂದಲ)

**ಅಧ್ಯಕ್ಷರು:** ಈ ರೀತಿಯಾಗಿ ನೀವೇ ಗೊಂದಲ ಡಿಕ್ಟೇಟ್ ಮಾಡುವುದಾದರೆ ಮಾಡಿ.

(ಗೊಂದಲ)

**ಅಧ್ಯಕ್ಷರು :** ಈ ಸದನಕ್ಕೊಂದು ಸಂಪ್ರದಾಯ ಇದೆ

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:–** ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ಸದಸ್ಯರು ಮಾಡುತ್ತಿರುವ ಧರಣಿ ಕಾನೂನು ಬಾಹಿರವಾಗಿದೆ

(ಗೊಂದಲ)

**ಅಧ್ಯಕ್ಷರು:–** ಆಯಿತು. ಈಗ ಸರ್ಕಾರದ ಪರವಾಗಿ ಮಾನ್ಯ ಜಯ ಚಂದ್ರರವರು ಮಾತನಾಡುತ್ತಾರೆ.

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಅಧ್ಯಕ್ಷರೆ, ದಯವಿಟ್ಟು ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ಈ ವಿಷಯದ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:–** ಹೊರಗಡೆ ರೈತರು ಹೋರಾಟ ಮಾಡುತ್ತಿದ್ದಾರೆ. ಆದ್ದರಿಂದ, ಇದರ ಬಗ್ಗೆ ಚರ್ಚೆ ಪ್ರಾರಂಭ ಮಾಡುವುದಕ್ಕೆ

ಅವಕಾಶ ಕೊಡಬೇಕು ಇವತ್ತಿನ ದಿವಸ ಸರ್ಕಾರ ರೈತರ ಬಗ್ಗೆ ನಿರ್ಲಕ್ಷ್ಯ ಮಾಡುತ್ತಿದೆ.

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:**– ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಲ್ಲಿರು ವುದನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರು ದಯಮಾಡಿ ನೋಡ ಬೇಕಾಗುತ್ತದೆ.

(ಗೊಂದಲ)

**ಅಧ್ಯಕ್ಷರು:** ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ.

**ಶ್ರೀ ಬಸವರಾಜ ರಾಯರೆಡ್ಡಿ.**– ನನಗೆ ಅನುಮತಿ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

**ಶ್ರೀ ಆರ್.ಅಶೋಕ್** – ತಾವು ರೈತರ ವಿರೋಧವಾಗಿ ಮಾತನಾಡು ತ್ತೀರಾ?

(ಗೊಂದಲ)

**ಅಧ್ಯಕ್ಷರು:**– ಸಭೆಯ ಸಮಯವನ್ನು ವೇಸ್ಟ್ ಮಾಡುತ್ತಿದ್ದೀರಿ.

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ**– ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ಗೌರವ ಕೊಡುತ್ತಾರೆಂದು ನಾನು ಭಾವಿಸಿರುತ್ತೇನೆ. ರೂಲ್ 38ರಲ್ಲಿರುವುದನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ ಅದರಲ್ಲಿ ಏನಿದೆ ಎಂದರೆ, "ಪ್ರಶ್ನೋತ್ತರ ಅವಧಿ: ಅಧ್ಯಕ್ಷರು ಅನ್ಯಥಾ ನಿರ್ದೇಶಿಸಿದ ಹೊರತು ಪ್ರತಿಯೊಂದು ದಿನದ ಉಪವೇಶನದ ಪ್ರಾರಂಭದ ಮೊದಲನೆಯ ಒಂದು ಗಂಟೆಯ ಅವಧಿಯಲ್ಲಿ ಪ್ರಶ್ನೆ ಕೇಳುವುದಕ್ಕೆ ಮತ್ತು ಉತ್ತರಿಸುವುದಕ್ಕೆ

ಇರತಕ್ಕದ್ದು." ಎಂದು ಇದರಲ್ಲಿ ಸ್ಪಷ್ಟವಾಗಿ ಹೇಳಿದೆ. ಆದ್ದರಿಂದ, ಮೊದಲು ಪ್ರಶ್ನೋತ್ತರ ಮಾಡದೆ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ ಆದ್ದರಿಂದ, ಮಾನ್ಯ ವಿರೋಧ ಪಕ್ಷದ ನಾಯಕರು ಧರಣಿ ನಿಲ್ಲಿಸಿ ತಮ್ಮ ತಮ್ಮ ಸ್ಥಾನಕ್ಕೆ ಬಂದು ಮುಂದಿನ ಕಾರ್ಯಕ್ರಮವನ್ನು ನೆಡಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಇದರ ಬಗ್ಗೆ ತಾವು ಒಂದು ರೂಲಿಂಗ್ ಕೊಡಬೇಕಾಗುತ್ತದೆ.

**ಶ್ರೀ ಜಗದೀಶ್ ಶೆಟ್ಟರ್:**– ಕಬ್ಬು ಬೆಳೆಗಾರರ ಬಗ್ಗೆ ಮಾತನಾಡುವುದಕ್ಕೆ ಮೊದಲು ಅವಕಾಶ ಕೊಡಬೇಕು

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ** :– ಮಾನ್ಯ ಅಧ್ಯಕ್ಷರೆ, ಇಲ್ಲಿ ಎಲ್ಲರೂ ಮಾತ ನಾಡುತ್ತಿರುವುದರಿಂದ ಯಾರು ಎನು ಮಾತನಾಡುತ್ತಾರೆಂಬುದು ಗೊತ್ತಾಗು ತ್ತಿಲ್ಲ.

(ಗೊಂದಲ)

**ಅಧ್ಯಕ್ಷರು:**– ನಾವೇನು ಮಾರ್ವಾಡಿ ಮಕ್ಕಳೆ? ನಾವೆಲ್ಲರೂ ರೈತರ ಮಕ್ಕಳು, ರೈತರ ಸಮಸ್ಯೆ ನಮಗೆ ಗೊತ್ತಿಲ್ಲವೆ? ಪ್ರಶ್ನೋತ್ತರ ಅವಧಿ ಮುಗಿದ ನಂತರ ಇಡೀ ದಿವಸ ಈ ಬಗ್ಗೆ ಚರ್ಚೆ ಮಾಡೋಣ. ಸರ್ಕಾರದ ಕಡೆಯಿಂದ ಇದರ ಬಗ್ಗೆ ಏನಾದರೂ ಹೇಳುವುದಾದರೆ ಹೇಳಿ.

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:**– ಮಾನ್ಯ ಅಧ್ಯಕ್ಷರೆ, ಇಲ್ಲಿ ಏನು ನಡೆಯುತ್ತಿದೆ ಎಂದು ಯಾರಿಗೂ ಅರ್ಥವಾಗುತ್ತಿಲ್ಲ. ಹಾಗೆಯೇ, ಯಾರು ಏನು ಮಾತನಾಡುತ್ತಿದ್ದಾರೆಂಬುದು ಸಹ ಯಾರಿಗೂ ಕೇಳಿಸುತ್ತಿಲ್ಲ. ಇದರ ಉದ್ದೇಶ ನನಗೆ ಅರ್ಥವಾಗುತ್ತಿಲ್ಲ. ನಿಲುವಳಿ ಸೂಚನೆಯನ್ನು ಮೊದಲು ಪ್ರಸ್ತಾಪ ಮಾಡದೆ ಈ ರೀತಿಯಾಗಿ ನೇರವಾಗಿ ಸದನದ ಬಾವಿಗೆ ಬಂದರೆ ಹೇಗೆ?

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:**– ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ನಾವು ಕೇಳುತ್ತಿದ್ದೇವೆ.

(ಗೊಂದಲ)

**ಅಧ್ಯಕ್ಷರು:**– ದಯವಿಟ್ಟು ಎಲ್ಲರೂ ನಿಮ್ಮ ಸ್ಥಾನಗಳಿಗೆ ಹೋಗಿ ಪ್ರಸ್ತಾಪ ಮಾಡಿ. ಆದರೆ, ಇದರ ಬಗ್ಗೆ ಚರ್ಚೆ ಈಗ ಇಲ್ಲ. ಪ್ರಶ್ನೋತ್ತರ ಆದ ಮೇಲೆ ಚರ್ಚೆಗೆ ಅವಕಾಶ ಕೊಡುತ್ತೇನೆ

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):**– ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಯಾವಾಗಲೂ ಕೂಡ ನಿಲುವಳಿ ಸೂಚನೆ ಬಗ್ಗೆ preliminary Submission ಮಾಡುವುದಕ್ಕೆ ಅವಕಾಶ ಕೊಟ್ಟಿರತಕ್ಕಂಥ ಅನೇಕ ನಿದರ್ಶನಗಳಿವೆ ಆದರೆ, ಪ್ರಶ್ನೋತ್ತರ ವೇಳೆಯನ್ನು ಮುಂದೂಡಿ ನಿಲುವಳಿ ಸೂಚನೆ ಬಗ್ಗೆ ಚರ್ಚೆ ಮಾಡಿರತಕ್ಕಂಥದು ಇಲ್ಲ.

**ಶ್ರೀ ಜಗದೀಶ್ ಶೆಟ್ಟರ್:**– ಬಹಳಷ್ಟು ಸಾರಿ ಆಗಿದೆ ನಿಮ್ಮ ಅವಧಿಯಲ್ಲಿ ನೀವೇ ಮಾಡಿದ್ದೀರಿ.

(ಗೊಂದಲ)

**ಶ್ರೀ. ಸಿದ್ಧರಾಮಯ್ಯ (ಮುಖ್ಯಮಂತ್ರಿಗಳು).**– ನೀವು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಈ ರೀತಿಯಾಗಿರುವ ಒಂದನ್ನು ತೋರಿಸಿ. ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ನಿಯಮಾವಳಿ ಪ್ರಕಾರ ಇದ್ದರೆ ಅದರ ಬಗ್ಗೆ ಪ್ರಿಲಿಮನರಿ ಸಬ್‌ಮಿಷನ್ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಿ. ಆನಂತರ ಅದರ ಬಗ್ಗೆ ಚರ್ಚೆ ಮತ್ತು ಉತ್ತರ ಕೊಡುವುದಕ್ಕೆ ಸರ್ಕಾರ ತಯಾರಿದೆ.

**ಅಧ್ಯಕ್ಷರು:**–ಆಯಿತು. ಎಲ್ಲರೂ ಬಾವಿಯಿಂದ ಹೊರಕ್ಕೆ ಬಂದು ತಮ್ಮ ತಮ್ಮ ಸ್ಥಾನಕ್ಕೆ ಹೋಗಿ.

(ಈ ಹಂತದಲ್ಲಿ ಜೆಡಿ(ಎಸ್) ಮತ್ತು ಬಿಜೆಪಿ ಹಾಗೂ ಬಿಎಸ್ಆರ್ ಪಕ್ಷದ ಸದಸ್ಯರು ಸದನದಿಂದ ತಮ್ಮ ಸ್ಥಾನಕ್ಕೆ ತೆರಳಿದರು. ಆದರೆ, ಕೆಜೆಪಿ ಪಕ್ಷದ ಸದಸ್ಯರು ಮಾತ್ರ ಸದನ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು.)

(ಈ ಸಮಯದಲ್ಲಿ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಸದನ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು.)

**ಅಧ್ಯಕ್ಷರು:–** ಮಾನ್ಯ ಯಡಿಯೂರಪ್ಪನವರೆ, ನೀವು ಈ ರೀತಿಯಾಗಿ ಸದನ ಬಾವಿಯಲ್ಲಿ ನಿಂತುಕೊಂಡು ಮಾತನಾಡುವುದು ಸರಿಯಲ್ಲ. ನಿಮ್ಮ ಸ್ಥಾನಕ್ಕೆ ಹೋಗಿ ಈ ಬಗ್ಗೆ ಹೇಳಿ ನೀವೇ ಈ ರೀತಿ ಮಾಡಿದರೆ ನಾನೇನು ಹೇಳಲಿ? ಇದೇ ವಿಷಯವನ್ನು ಅಲ್ಲಿಗೆ ಹೋಗಿ ಮಾತನಾಡಿ. ಇಲ್ಲಿ ಮಾತ ನಾಡಿದರೆ ಯಾವುದೂ ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ ಮಾನ್ಯ ಯಡಿ ಯೂರಪ್ಪನವರೆ, ಈ ರೀತಿ ಮಾತನಾಡಿದರೆ ಹೇಗೆ? ಇದು ಚರ್ಚೆ ಆಗುತ್ತಾ? ಹಾಗೆಯೇ ಇದು ಶಾಸನಸಭೆ ಆಗುತ್ತದೆಯೇ? ಮಾನ್ಯ ಯಡಿಯೂರಪ್ಪನವರೆ. ನಾನು ಒಂದು ಮಾತನ್ನು ಹೇಳುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಿ.

**ಅಧ್ಯಕ್ಷರು:–** ಆಯಿತು, ಮಾತನಾಡಿ.

**ಶ್ರೀ ಜಗದೀಶ್ ಶೆಟ್ಟರ್:–** ಮಾನ್ಯ ಅಧ್ಯಕ್ಷರೆ, ಮಾನ್ಯ ಕುಮಾರ ಸ್ವಾಮಿಯವರು ಒಂದು ನಿಲುವಳಿ ಸೂಚನೆ ಕೊಟ್ಟಿದ್ದಾರೆ. ಹಾಗೆಯೇ ಕಬ್ಬು ಬೆಳೆಗಾರರ ಬಗ್ಗೆ ನಾವೊಂದು ನಿಲುವಳಿ ಸೂಚನೆ ಕೊಟ್ಟಿದ್ದೇವೆ. ಆದ್ದರಿಂದ, ಅವರು ಪ್ರಸ್ತಾಪ ಮಾಡಿದ ಮೇಲೆ ನಾನೂ ಸಹ ಈ ಬಗ್ಗೆ ಪ್ರಸ್ತಾಪ ಮಾಡು ತ್ತೇನೆ.

**ಅಧ್ಯಕ್ಷರು:–** ಆಯಿತು, ನಿಮಗೂ ಸಹ ಅವಕಾಶ ಕೊಡುತ್ತೇನೆ. ಮಾನ್ಯ ಯಡಿಯೂರಪನ್ವವರೆ, ನಿಮಗೆ ನಾನು ಕೈಮುಗಿದು ಕೇಳಿಕೊಳ್ಳುವು ದೇನೆಂದರೆ, ಸದನ ನಡೆಯುವುದಕ್ಕೆ ತಾವು ಸಹಕರಿಸಬೇಕು. ಇದು ಒಳ್ಳೆಯ

ಲಕ್ಷಣ ಅಲ್ಲ. ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ. ನೀವು ಏನು ಹೇಳಬೇಕೆಂದು ಇದೆಯೋ ಅದನ್ನು ಅಲ್ಲಿಗೆ ಹೋಗಿ ಹೇಳಿ. ಅದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಜಗದೀಶ್ ಶೆಟ್ಟರ್:**– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಮಾಜಿ ಮುಖ್ಯಮಂತ್ರಿಗಳು ಮತ್ತು ಹಿರಿಯ ನಾಯಕರಾಗಿದ್ದಾರೆ ಅವರು ಪ್ರಸ್ತಾಪ ಮಾಡಿರುವ ವಿಷಯಕ್ಕೆ ನಮ್ಮ ಬೆಂಬಲ ಸಹ ಇದೆ. ಅಂದರೆ, ಶಾದಿಭಾಗ್ಯ ಮತ್ತು ಎಪಿಎಲ್ ಕಾರ್ಡ್‌ದಾರರ ಬಗ್ಗೆ ಮಾತನಾಡಬೇಕಾಗಿದೆ

**ಅಧ್ಯಕ್ಷರು:**– ನಿಮಗೂ ಸಹ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ನಾನು ನಿಮ್ಮಲ್ಲಿ ಕೈಮುಗಿದು ಕೇಳುವುದೇನೆಂದರೆ, ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ. ಇಲ್ಲದಿದ್ದರೆ ನಾನು lay ಮಾಡಬೇಕಾಗುತ್ತದೆ. ನನಗೆ ಬೇರೆ ಮಾರ್ಗ ಇಲ್ಲ

**ಶ್ರೀ ಜಗದೀಶ್ ಶೆಟ್ಟರ್:** ನಾನು ಸರ್ಕಾರಕ್ಕೆ ರಿಕ್ವೆಸ್ಟ್ ಮಾಡುತ್ತೇನೆ ಯಾವ ರೀತಿ ನೆಗ್ಲಿಜೆನ್ಸ್ ಆಗುತ್ತಿದೆ. ಅವರು ಯಾವ ರೀತಿ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಇವರಿಗೆ ಒಂದು ಸೌಜನ್ಯ ಸಹಿತ ಇಲ್ಲ. ಆ ರೀತಿಯ ಒಂದು ನಡವಳಿಕೆ ಇದೆ

**ಅಧ್ಯಕ್ಷರು:** ನೀವು ಪ್ರಸ್ತಾಪ ಮಾಡಿ, ಅವಕಾಶ ಮಾಡಿ ಕೊಡುತ್ತೇನೆ. ಅದಕ್ಕೆ ಸರ್ಕಾರದಿಂದ ಉತ್ತರ ಬರದಿದ್ದರೆ ಆಮೇಲೆ ಹೇಳಿ. ನೀವು ಪ್ರಸ್ತಾಪವೇ ಮಾಡಿಲ್ಲ, ಅದು ಹೇಗೆ ಅವರು ಉತ್ತರವನ್ನು ಕೊಡುತ್ತಾರೆ?

**ಶ್ರೀ ಹೆಚ್.ಡಿ.ರೇವಣ್ಣ:** ಮಾನ್ಯ ಯಡಿಯೂರಪ್ಪನವರು ಹಿರಿಯ ಸದಸ್ಯರಿರುತ್ತಾರೆ

**ಶ್ರೀ ಜಗದೀಶ್ ಶೆಟ್ಟರ್:** Business ನಡೆಯಬೇಕು

**ಅಧ್ಯಕ್ಷರು:** ಅದಕ್ಕಾಗಿ ನಾನು ಹೇಳಿದೆ ಅವರು ಅವರ ಸೀಟಿನಲ್ಲಿ ಕುಳಿತು ಹೇಳಲಿ ಇಲ್ಲಿ ಹೇಳಿದರೆ ಅವರು ಹೇಗೆ ಉತ್ತರವನ್ನು ಕೊಡುತ್ತಾರೆ ?

(ಗೊಂದಲ)

**ಶ್ರೀ ತನ್ವೀರ್ ಶೇಕ್**: ಇಲ್ಲಿ ಯಾವ ವಿಚಾರ ಪ್ರಮುಖ? ಕಬ್ಬು ಬೆಳೆಗಾರರ ವಿಚಾರ ಚರ್ಚೆ ಮಾಡುವಾಗ ಈ ಶಾದಿಭಾಗ್ಯ ಯೋಜನೆ ವಿಚಾರಕ್ಕೆ ಬಂದರೆ, ಸರ್ಕಾರ ಯಾವುದಕ್ಕೆ ಉತ್ತರ ಕೊಡಬೇಕು? ಪ್ರಸ್ತಾಪ ಯಾವುದನ್ನು ಮಾಡಬೇಕು ಅದು ಮಾಡಿದರೆ ವಿಚಾರ ಹೊರಗೆ ಬರುತ್ತದೆ ಉತ್ತರ ಸಿಗುತ್ತದೆ.

(ಗೊಂದಲ)

(ಈ ಹಂತದಲ್ಲಿ ಶ್ರೀ ಬಿ ಎಸ್.ಯಡಿಯೂರಪ್ಪನವರು ತಮ್ಮ ಸ್ಥಾನಕ್ಕೆ ಹೋದರು.)

**ಶ್ರೀ ಬಿ.ಎಸ್.ಯರಿಯೂರಪ್ಪ**: ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಬಹಳ ಪ್ರಮುಖವಾದಂಥ ಕಾರ್ಯ ಕಲಾಪಗಳ ಬಗ್ಗೆ ಚರ್ಚೆ ಆಗಬೇಕಾಗಿದೆ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿರುವಂತಹ ಕಬ್ಬು ಬೆಳೆಗಾರರು ಇರಬಹುದು, ಭತ್ತದ ಬೆಳೆಗಾರರು ಇರಬಹುದು. ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಅವರು ಚರ್ಚೆಯಲ್ಲಿ ಭಾಗವಹಿಸಬೇಕೆಂದು ಇದ್ದಾರೆ. ಇಲ್ಲಿ ಚರ್ಚೆ ಮಾಡಬೇಕಾಗಿದೆ. ಉತ್ತರ ಕರ್ನಾಟಕದ ಈ ಭಾಗದ ಜನರ ಸಮಸ್ಯೆಗಳ ಬಗ್ಗೆ ಪರಿಹಾರ ಹುಡುಕಬೇಕಾಗಿದೆ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಅದಕ್ಕೆ ನನ್ನ ಸಂಪೂರ್ಣ ಸಹಕಾರ ಇದೆ. ನಾನು ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದು ಏನೆಂದರೆ, ನಾನು ಕಳೆದ 25 ದಿವಸಗಳಿಂದ ಶಾದಿಭಾಗ್ಯ ಯೋಜನೆಯನ್ನು ಎಲ್ಲರಿಗೂ ಜಾರಿಗೆ ಮಾಡ ಬೇಕೆಂದು ಹೇಳಿದ್ದೇನೆಯೇ ಹೊರತು ನಾನು ಅಲ್ಪಸಂಖ್ಯಾತರಿಗೆ ಕೊಡಬೇಡಿ ಎಂದು ಹೇಳಿಲ್ಲ. ಎ.ಪಿ.ಎಲ್ ಕಾರ್ಡುದಾರರು 37 ಲಕ್ಷ ಜನರು ಇದ್ದಾರೆ. ಅವರಿಗೆ ಸಿಗತಕ್ಕಂಥ ಅಕ್ಕಿ ಕೊಡುವ ಯೋಜನೆ ನಿಂತು ಹೋಗಿದೆ. ಸುಮಾರು 10 ಕೆ.ಜಿ ಅಕ್ಕಿಯನ್ನು ಒಂದು ಕೆ.ಜಿ.ಗೆ 10 ರೂ.ಗಳಂತೆ ಗೋಧಿಯನ್ನು 8 ರೂ.ಗಳಿಂದ ನಾವು ಕೊಡುತ್ತಿದ್ದೆವು. ಆ 37 ಲಕ್ಷ ಜನರು ಇವತ್ತು ಬೀದಿ ಪಾಲಾಗಿದ್ದಾರೆ. ಇನ್ನೊಂದು ಕಡೆಗೆ ಕಬ್ಬು ಬೆಳಗಾರರಿಗೆ ಒಂದು ಟನ್‌ಗೆ 2500 ರೂ.ಗಳನ್ನು ಘೋಷಣೆ ಮಾಡಿದ್ದಾರೆ ಅವರಿಗೆ ಆ ದುಡ್ಡು ಸಿಗುತ್ತಿಲ್ಲ. ಕಾರ್ಖಾನೆ ಮಾಲೀಕರು ಹಣ ಕೊಡುತ್ತಿಲ್ಲ, ಅವರು ಒಳ ಒಪ್ಪಂದ ಮಾಡಿ

ಕೊಂಡಿದ್ದಾರೆಂದು ಕೂಗುತ್ತಾ ರೈತರು ಅಲ್ಲಿ ನಿಂತಿದ್ದಾರೆ ಭತ್ತದ ಬೆಳೆಗಾರರು ಬೀದಿ ಪಾಲಾಗಿದ್ದಾರೆ

(ಗೊಂದಲ)

**ಅಧ್ಯಕ್ಷರು:** ನಾನು ಒಂದು ವಿಷಯವನ್ನು ಹೇಳುತ್ತೇನೆ ಕೇಳಿ ನೀವು ಆಚೆ ಹೋಗಿ ಕುಳಿತುಕೊಳ್ಳುತ್ತೀರಾ?

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ:** ಸರ್ಕಾರದ ದಿವ್ಯ ನಿರ್ಲಕ್ಷ್ಯದ ಬಗ್ಗೆ ಹೇಳುತ್ತಿದ್ದೇನೆ. ಸಂಧಾನ ಇಲ್ಲ, ಮಾತುಕತೆ ಇಲ್ಲ. ಅದಕ್ಕಾಗಿ ನಾನು ಹಗಲು–ರಾತ್ರಿ ಧರಣಿಯನ್ನು ಮುಂದುವರೆಸುತ್ತಿದ್ದೇನೆ.

(ಈ ಹಂತದಲ್ಲಿ ಶ್ರೀ ಬಿ ಎಸ್.ಯಡಿಯೂರಪ್ಪನವರು ಸದನದ ಬಾವಿಗೆ ಬಂದರು)

**ಶ್ರೀ ಹೆಚ್.ಡಿ.ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು):** ಮಾನ್ಯ ಅಧ್ಯಕ್ಷರೆ, ನಾವು ಸದನದ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಬೇಕೆಂದು ಏನಿಲ್ಲ. ನಿಯಮ 60ರ ಅಡಿಯಲ್ಲಿ, ಕಬ್ಬು ಬೆಳೆಗಾರರು ಏನಿದ್ದಾರೆ, ರೈತರು ಬೆಳೆದಿರತಕ್ಕಂಥ ಹಲವಾರು ಬೆಳೆಗಳ ವಿಷಯದಲ್ಲಿ ಸರಿಯಾದ ರೀತಿಯಲ್ಲಿ ಬೆಲೆ ಬರುತ್ತಿಲ್ಲವೆನ್ನುವ ಆತಂಕದಲ್ಲಿದ್ದಾರೆ, ಅದು ಪ್ರಮುಖವಾದಂಥ ವಿಚಾರ. ಇವತ್ತು ಪ್ರಶ್ನೋತ್ತರ ವೇಳೆಯನ್ನು ಮುಂದೂಡಿ ಪ್ರಮುಖವಾದ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕೆನ್ನುವುದು ಈ ಸದನದ ಸದಸ್ಯರ ಭಾವನೆ ಆಗಿದೆ. ಇವತ್ತು ನಾನು ಪ್ರಮುಖವಾಗಿ ಈ ಒಂದು ಉತ್ತರ ಕರ್ನಾಟಕದ ಬೆಳಗಾಂ ಭಾಗದಲ್ಲಿ ಈ ಒಂದು ಅಧಿವೇಶನವನ್ನು ನಡೆಸುವಂಥ ಒಂದು ಉದ್ದೇಶ ಏನಿದೆ. ಹಲವಾರು ರೀತಿಯ ಸಮಸ್ಯೆಗಳಿಗೆ ಪರಿಹಾರ ದೊರಕಬೇಕು ಎನ್ನುವುದು ನಮ್ಮೆಲ್ಲರ ಒಂದು ಉದ್ದೇಶ. ಇವತ್ತು ಪ್ರಮುಖವಾಗಿ ಕಬ್ಬು ಬೆಳಗಾರರು ಬೆಳಗಾಂ ಅಧಿವೇಶನ ನಡೆಯುವಂಥ ಒಂದು ಸಂದರ್ಭದಲ್ಲಿ ರಸ್ತೆಯಲ್ಲಿ ಮತ್ತೆ ಬಂದು ಕುಳಿತಿದ್ದಾರೆ. ಇವತ್ತು ಈ ಸದನದ ಪ್ರಮುಖವಾದಂಥ ಒಂದು

ವಿಚಾರ, ರೈತರ ಬಗ್ಗೆ ಹೆಚ್ಚಿನ ವಿಚಾರಗಳು ಚರ್ಚೆ ಆಗಬೇಕು ಎನ್ನುವ ಅಭಿಪ್ರಾಯ ಏನಿದೆ, ಅದರ ಹಿನ್ನೆಲೆಯಲ್ಲಿ ಇವತ್ತು ಆ ಒಂದು ಕಬ್ಬು ಬೆಳೆಗಾರರ ವಿಷಯ ಇರಬಹುದು, ಭತ್ತ ಬೆಳೆಗಾರರು ಇರಬಹುದು, ಹತ್ತಿ ಬೆಳೆಗಾರರು ಇರಬಹುದು ಮೆಕ್ಕೆಜೋಳ ಬೆಳೆಗಾರರ ಸಮಸ್ಯೆ ಇರಬಹುದು ತೆಂಗು ಮತ್ತು ಅಡಿಕೆ ಬೆಳೆಗಾರರ ಒಂದು ಸಮಸ್ಯೆ ಇರಬಹುದು. ಯಾವುದೇ ರೀತಿಯಲ್ಲಿ ಕಳೆದ 6 ತಿಂಗಳಲ್ಲಿ ಸರ್ಕಾರ ಕೃಷಿ ಅಯೋಗ ಬೆಲೆಯ ಬಗ್ಗೆ. . .

**ಅಧ್ಯಕ್ಷರು:** Detailsಗೆ ಹೋಗಬೇಡಿ, ವಿಷಯವನ್ನು ಸಂಕ್ಷಿಪ್ತವಾಗಿ ಹೇಳಿ. ಚರ್ಚೆ ಮಾಡುವಾಗ ಎಲ್ಲಾ ಬರುತ್ತದೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:** ನಾವು Adjournment Motion move ಮಾಡಿರುತ್ತೇವೆ.

**ಶ್ರೀ ಎನ್.ಚೆಲುವರಾಯಸ್ವಾಮಿ:** ಮಾನ್ಯ ಯಡಿಯೂರಪ್ಪನವರು ಸದನದ ಬಾವಿಯಲ್ಲಿದ್ದಾರೆ, ಅವರು ಸೀನಿಯರ್ ಮೆಂಬರ್ ಇರುತ್ತಾರೆ.

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪಶು ಸಂಗೋಪನೆ ಸಚಿವರು):** ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಿಗೆ ತಾವು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ ಅವರು preliminary submission ಮಾಡುತ್ತಿದ್ದಾರೆ. ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು. ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿ ಗಳಾಗಿದ್ದವರು, ಸಭೆಯ ಕಾರ್ಯಕಲಾಪಗಳನ್ನು ನಡೆಸಬೇಕಾದಾಗ ತಾವು ಬಂದು ಸದನದ ಬಾವಿಯಲ್ಲಿ ಕುಳಿತಂಥ ಸಂದರ್ಭದಲ್ಲಿ ಚರ್ಚೆ ಮಾಡು ವುದು ಎಷ್ಟು ಸಾಧುವಾಗುತ್ತದೆ? ದಯಮಾಡಿ ವಿರೋಧ ಪಕ್ಷದ ನಾಯಕರು ಆ ಭಾಗದಲ್ಲಿರತಕ್ಕಂಥವರೆಲ್ಲರಿಗೂ ತಾವು ನಾಯಕರು. ತಾವು ವಿನಂತಿ ಮಾಡಿ ಮಾನ್ಯ ಯಡಿಯೂರಪ್ಪನವರ ಮನವೊಲಿಸಿ ಕರೆಯತಕ್ಕಂಥದ್ದನ್ನು ದಯ ಮಾಡಿ ತಾವು ಮಾಡಬೇಕು. ಸರ್ಕಾರದಿಂದ ನಾನು ಅಧಿಕೃತವಾಗಿ ಮನವಿ ಯನ್ನು ಮಾಡುತ್ತಿದ್ದೇನೆ.

(ಗೊಂದಲ)

**ಶ್ರೀ ಆರ್.ಅಶೋಕ** ಮಾನ್ಯ ಯಡಿಯೂರಪ್ಪನವರು ಕಳೆದ 25 ದಿವಸಗಳಿಂದ ಧರಣಿಯನ್ನು ಮಾಡುತ್ತಿದ್ದರು. ಸರ್ಕಾರದಿಂದ ಒಬ್ಬ ಪ್ರತಿನಿಧಿಯೂ ಹೋಗಿ ಭೇಟಿ ಮಾಡಿಲ್ಲ. ಅವರಿಗೆ ಈಗ ಇದನ್ನು ಹೇಳದೇ ಬೇರೆ ದಾರಿ ಇಲ್ಲ. ವಿಧಾನಸೌಧಕ್ಕೆ ಒಂದು ಕಿ.ಮೀ. ದೂರದಲ್ಲಿ ಧರಣಿ ಕುಳಿತಿದ್ದರೂ ಒಬ್ಬರೂ ಹೋಗಿ ಭೇಟಿ ಆಗಿಲ್ಲ. ಅಧಿಕಾರ ಶಾಶ್ವತವಲ್ಲ. ಆಗ ನಿಮಗೆ ಜ್ಞಾಪಕ ಬರಲಿಲ್ಲ

**ಶ್ರೀ ಟಿ.ಬಿ.ಜಯಚಂದ್ರ.** ಈಗ ಅವರು ನಿಮ್ಮ ಹತ್ತಿರ ಇಲ್ಲ, ಅವರಿಗೆ ನಿಮ್ಮ ಸಹಾಯ ಏನೂ ಬೇಕಾಗಿಲ್ಲ ಬಿಡಿ.

(ಗೊಂದಲ)

**ಶ್ರೀ ಆರ್.ಅಶೋಕ:** ಯಾರೇ ಒಂದು ಅರ್ಜಿಯನ್ನು ಕೊಟ್ಟರೂ ಸರ್ಕಾರ action ತೆಗೆದುಕೊಳ್ಳಬೇಕು. ಮಾಜಿ ಮುಖ್ಯಮಂತ್ರಿಗಳು 25 ದಿವಸದಿಂದ ಅಲ್ಲಿ ಒಂದು ಧರಣಿ ಕುಳಿತಿದ್ದಾರೆ, ಅಲ್ಲಿ ಹೋಗಿ ಕೇಳಿಲ್ಲ, ಇಲ್ಲಿ ಕೇಳುತ್ತಾರೆ. ಎಷ್ಟು ನ್ಯಾಯ?

**ಶ್ರೀ ಟಿ.ಬಿ.ಜಯಚಂದ್ರ:** ಮಾನ್ಯ ಯಡಿಯೂರಪ್ಪನವರು ಮತ್ತು ಎಲ್ಲಾ ಸದಸ್ಯರುಗಳು ಕೂಡ ಅವರ ಆಸನಗಳಿಗೆ ಬಂದು ಕುಳಿತುಕೊಳ್ಳಬೇಕು, ಚರ್ಚೆ ಮಾಡಬೇಕು. ನೀವು ಹೇಳತಕ್ಕಂಥ ಎಲ್ಲಾ ವಿಚಾರಗಳ ಬಗ್ಗೆ ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಾಗಿದೆ. ಆದರೆ ವಿಚಾರ ಪ್ರಸ್ತಾಪವಾಗದೆ ಧರಣಿಗೆ ತಾವು ಬರುವುದು ಎಷ್ಟು ಸಾಧು ಎನ್ನತಕ್ಕಂಥದ್ದು ತಾವು ಯೋಚೆನೆ ಮಾಡಿ.

**ಶ್ರೀ ಸಾ.ರಾ.ಮಹೇಶ್:** 25 ದಿವಸದಿಂದ ಒಬ್ಬ ಮಾಜಿ ಮುಖ್ಯ ಮಂತ್ರಿಗಳು ಹೋರಾಟ ಮಾಡುವಾಗ ತಾವು ಸೌಜನ್ಯಕ್ಕಾದರೂ ಹೋಗಿ ಮಾತನಾಡಿಸಬಹುದಾಗಿತ್ತು. ಯಾರಿಗೂ ಅಧಿಕಾರ ಶಾಶ್ವತವಲ್ಲ

(ಗೊಂದಲ)

**ಶ್ರೀ ಅಶೋಕ ಎಂ. ಪಟ್ಟಣ:** ನಾವು ಧರಣಿ ಕುಳಿತಾಗ ನಮ್ಮನ್ನು ಯಾರೂ ಬಂದು ಮಾತನಾಡಿಸಲಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ** ಬೆಳಗಾವಿಯಲ್ಲಿ ಮೊದಲನೇ ಅಧಿವೇಶನ ನಡೆಯುತ್ತಿದೆ. ಬಹುಶಃ ಇಡೀ ಜನ ಕಾತುರದಿಂದ ನೋಡುತ್ತಿದ್ದಾರೆ ಈ ಸದನದ ಒಳಗಡೆ ಏನಾಗುತ್ತಿದೆ ಎಂದು. ಈ ಭಾಗದಲ್ಲಿರುವ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕೇ ವಿನಹ ಈ ರೀತಿ ಮಾಡುವುದು ಸರಿಯಲ್ಲ. ಈ ಭಾಗದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕು.

**ಶ್ರೀ ಬಸವರಾಜ ಬೊಮ್ಮಾಯಿ:** ಸರ್ಕಾರ ಸ್ಪಂದನೆ ಮಾಡಬೇಕು, ಮಾಡದೇ ಈ ಪರಿಸ್ಥಿತಿ ಈಗ ಬಂದಿದೆ.

**ಶ್ರೀ ಟಿ.ಬಿ.ಜಯಚಂದ್ರ:** ನಿಮ್ಮ ಸಹಾಯ ಅವರಿಗೆ ಏನೂ ಬೇಕಾಗಿಲ್ಲ. ಅವರು ಸಮರ್ಥರಿದ್ದಾರೆ, ವಿಚಾರ ಪ್ರಸ್ತಾಪ ಮಾಡುತ್ತಾರೆ.

**ಶ್ರೀ ಬಸವರಾಜ ಬೊಮ್ಮಾಯಿ:** ನಿಮಗೆ ಸೌಜನ್ಯಕ್ಕೂ ಹೋಗಿ ಭೇಟಿ ಆಗುವುದಕ್ಕೆ ಆಗುವುದಿಲ್ಲವೆಂದರೆ ಸರ್ಕಾರ ಇದೆ ಎನ್ನಬೇಕೇ, ಇಲ್ಲ ಎನ್ನ ಬೇಕೇ? ಏನು ಶಾಶ್ವತವಾಗಿ ನೀವೆ ಇರುತ್ತೀರಾ? ನೀವೇ ಇರುತ್ತೇವೆಂದು ಏನಾದರೂ ಬರೆಸಿಕೊಂಡು ಬಂದಿದ್ದೀರಾ? ನಾವು ಇಂಥದ್ದನ್ನು ಬಹಳ ನೋಡಿದ್ದೇವೆ. ಈ ವರ್ತನೆ ಸರಿಯಲ್ಲ. ಈ ಸರ್ವಾಧಿಕಾರಿ ವರ್ತನೆ ಬಹಳ ದಿನ ನಡೆಯುವುದಿಲ್ಲ.

(ಗೊಂದಲ)

**ಶ್ರೀ ಬಿ.ಜಡ್. ಜಮೀರ್ ಅಹ್ಮದ್ ಖಾನ್:** ಈಗ ಹೇಳುತ್ತಿದ್ದಾರೆ ಬಿ.ಜೆ.ಪಿ.ಯವರು. ಒಬ್ಬ ಶಾಸಕರು ಯಾರಾದರೂ ಬಂದಿದ್ದರೇ? ಸರ್ಕಾರ ಬರುವುದು ಬೇಡ. ಬಿ.ಜೆ.ಪಿ.ಗೆ ಅಧಿಕಾರ ಬಂದಿರುವುದು ಮಾನ್ಯ ಯಡಿಯೂರಪ್ಪನವರಿಂದ. ಅದು ಎಲ್ಲರಿಗೂ ಗೊತ್ತಿದೆ. ಕನಿಷ್ಟ ಅವರಾದರೂ ಬರಬಹುದಾಗಿತ್ತು. ಬೊಮ್ಮಾಯಿಯವರೆ, ಈಗ ಮಾತನಾಡುತ್ತಿದ್ದೀರಿ. ದಯ ಮಾಡಿ ಕುಳಿತುಕೊಳ್ಳಿ, ನೀವೇನು ಮಾಡುತ್ತಿದ್ದೀರಿ? ನೀವು ಬೆಂಬಲ ಕೊಡಬೇಕಾಗಿತ್ತು. ದಯಮಾಡಿ ಬಿ.ಜೆ.ಪಿ.ಯವರು ಮಾತನಾಡಬೇಡಿ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿದ್ದಾಗ ನೀವು ಎಷ್ಟು ಲಾಭ ಪಡೆದು ಕೊಂಡಿದ್ದೀರಿ?

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:** ಜಮೀರ್ ಅವರೆ, ನಿಮ್ಮ ಒಂದು ಕಾಲು ಅ ಕಡೆ ಇದೆ. ಏಕೆ ಸುಮ್ಮನೆ ಮಾತನಾಡುತ್ತೀರಿ?

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:** ಮಾನ್ಯ ಅಧ್ಯಕ್ಷರೆ, ಬಹುಶ. ಬೆಳಗಾವಿ ಅಧಿವೇಶನದ ಸಮಯ ಸರಿಯಾಗಿ ನಿಗದಿ ಆಗಿಲ್ಲವೆಂದು ಕಾಣಿಸುತ್ತದೆ. ಮೊದಲನೆ ದಿನವೇ ಏಕೋ ಸರಿಯಾಗಿಲ್ಲ.

(ಗೊಂದಲ)

**ಶ್ರೀ ಸಿ.ಟಿ.ರವಿ:** ಮಾನ್ಯ ಅಧ್ಯಕ್ಷರೆ, ಅಧಿವೇಶನದ ಸಮಯವನ್ನು ಸರಿಯಾಗಿ ನಿಗದಿ ಮಾಡಿಲ್ಲ. ಯಾವ ಸಮಯ ಅಧಿವೇಶನಕ್ಕೆ ಸೂಕ್ತವೆಂದು ಮಾನ್ಯ ರೇವಣ್ಣನವರನ್ನು ತಾವು ಕೇಳಬೇಕಾಗಿತ್ತು.

(ಗೊಂದಲ)

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:** ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರುವಂತಹ ಅನ್ನದಾತ ಕೃಷಿಕರ ವಿಷಯದಲ್ಲಿ ಸರ್ಕಾರ ಕಳೆದ ಆರು ತಿಂಗಳಿನಲ್ಲಿ ಸಮಯಕ್ಕೆ ಸರಿಯಾಗಿ ತೀರ್ಮಾನ ಮಾಡದೇ ಇವತ್ತು ರೈತರು ಹಲವಾರು ರೀತಿಯ ಆತಂಕದಲ್ಲಿದ್ದಾರೆ. ಇವತ್ತು ಆ ವಿಷಯದಲ್ಲಿ ಅತ್ಯಂತ ಪ್ರಮುಖವಾಗಿ ಚರ್ಚೆಯಾಗಬೇಕಾಗಿರುವ ಹಿನ್ನೆಲೆಯಲ್ಲಿ ನಾವು ಏನು Adjournment Motionಅನ್ನು move ಮಾಡಿದ್ದೇವೆ ಅದಕ್ಕೆ ತಾವು ಅನುಮತಿಯನ್ನು ಕೊಡ ಬೇಕು. ಸುದೀರ್ಘವಾಗಿ ವಿಷಯ ಚರ್ಚೆಯಾಗಬೇಕೆಂದು ನಮ್ಮ ಅಭಿಪ್ರಾಯ ಏನಿದೆ ಅದಕ್ಕೆ ಮನ್ನಣೆ ಮಾಡಿ ಚರ್ಚೆಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

(ಗೊಂದಲ)

**ಅಧ್ಯಕ್ಷರು:** ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಅವರು ಹೇಳುವ ವಿಚಾರದಲ್ಲಿ ತಾವು ಏನಾದರೂ ಹೇಳುವುದು ಇದೆಯೇ?

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:** ನಾವು ನಿಲುವಳಿ ಸೂಚನೆಯನ್ನು ಇವತ್ತು ಏನು ಕೊಟ್ಟಿದ್ದೇವೆ. . .

(ಗೊಂದಲ)

**ಅಧ್ಯಕ್ಷರು:** ಮಾನ್ಯ ಜಗದೀಶ್ ಶೆಟ್ಟರ್‌ರವರೆ ತಾವು ಹೇಳುತ್ತಿರುವ ವಿಚಾರ ಹಾಗೂ ಮಾನ್ಯ ಕುಮಾರಸ್ವಾಮಿಯವರು ಹೇಳುತ್ತಿರುವ ವಿಚಾರ ಎರಡೂ ಒಂದೇ ಅಲ್ಲವೇ?

(ಗೊಂದಲ)

**ಶ್ರೀ ಕೆ.ಎಂ.ಶಿವಲಿಂಗೇಗೌಡ:** ಮಾನ್ಯ ಅಧ್ಯಕ್ಷರೆ, ಅವರು ಧರಣಿ ಮಾಡುತ್ತಿದ್ದಾರೆ ಇವರು ಚರ್ಚೆ ಮಾಡುವುದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಅವಕಾಶ ಬರುತ್ತದೆಯೇ?

(ಗೊಂದಲ)

**ಅಧ್ಯಕ್ಷರು:** ಮಾನ್ಯ ಶಿವಲಿಂಗೇಗೌಡರೆ, ಅವರು ಚರ್ಚೆ ಮಾಡಲು ಅವಕಾಶ ಮಾಡಿ ಕೊಡಿ ಎಂದು ಕೇಳುತ್ತಿದ್ದಾರೆ.

(ಗೊಂದಲ)

**ಶ್ರೀ ಕೆ.ಎಂ.ಶಿವಲಿಂಗೇಗೌಡ:** ಅವರು ಧರಣಿಯಲ್ಲಿ ಕೂತಿದ್ದಾರೆ. ಸದನ order ನಲ್ಲಿ ಇಲ್ಲ.

(ಗೊಂದಲ)

**ಅಧ್ಯಕ್ಷರು:** ಮಾನ್ಯ ಶಿವಲಿಂಗೇಗೌಡರೆ, ಪ್ರಮುಖವಾದ ವಿಷಯವನ್ನು ಚರ್ಚೆಗೆ ತಂದಿದ್ದಾರೆ. ಚರ್ಚೆ ಮಾಡಲು ಅವಕಾಶ ಮಾಡಿಕೊಡೋಣ ತಾವು ಹೇಳುವುದು ಏನಾದರೂ ಇದ್ದರೆ ಹೇಳಿ. ಒಬ್ಬೊಬ್ಬರು ನಿಲುವಳಿ ಸೂಚನೆ ಕೊಟ್ಟಿದ್ದಾರೆ ಸಾಕು.

(ಗೊಂದಲ)

**ಶ್ರೀ ಕೆ ಎಂ ಶಿವಲಿಂಗೇಗೌಡ:** ಮಾನ್ಯ ಅಧ್ಯಕ್ಷರೆ

(ಗೊಂದಲ)

**ಅಧ್ಯಕ್ಷರು:** ಚರ್ಚೆ ಕಾಲದಲ್ಲಿ ಭಾಗವಹಿಸಿ.

(ಗೊಂದಲ)

**ಶ್ರೀ ತನ್ವೀರ್ ಸೇಠ್** · ಮಾನ್ಯ ಅಧ್ಯಕ್ಷರೆ, ಯಾವ ನಿಲುವಳಿ ಸೂಚನೆಯನ್ನು ಒಪ್ಪಿಕೊಳ್ಳಲಾಗಿದೆ ಯಾವುದನ್ನು ತಿರಸ್ಕರಿಸಲಾಗಿದೆ ಎನ್ನುವುದನ್ನು ಹೇಳಬೇಕಾಗುತ್ತದೆ. ಯಾವುದಾದರೂ ಒಂದು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಿ ಮೊದಲು ಯಾವ ನಿಲುವಳಿ ಸೂಚನೆ ಬಂದಿದೆ ಎಂದು ಸಭೆಗೆ ತಿಳಿಸಬೇಕಾಗುತ್ತದೆ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ–ಧಾರವಾಡ ಸೆಂಟ್ರಲ್):** ಇವತ್ತು ನಾವು ಪ್ರಮುಖವಾಗಿ ಕಬ್ಬು ಬೆಳೆಗಾರರು ಏನು ಸಂಕಷ್ಟದಲ್ಲಿದ್ದಾರೆ ಅದರ ಬಗ್ಗೆ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದಿದ್ದೇವೆ. ಕಬ್ಬು ದರ ನಿಗದಿ ಮಾಡಬೇಕೆಂದು ಒತ್ತಾಯ ಮತ್ತು ಸರ್ಕಾರ ಅದಕ್ಕೆ ಏನು ನಿರ್ಲಕ್ಷ್ಯ ಮಾಡಿದೆ, 2–3 ವಿಷಯಗಳನ್ನು preliminary ಆಗಿ ಹೇಳುತ್ತಿದ್ದೇನೆ. ಈಗಾಗಲೇ SAP ಕಾನೂನು ಅಸ್ತಿತ್ವದಲ್ಲಿದೆ. SAP ಕಾನೂನು ಪ್ರಕಾರ ಬೆಲೆ ನಿಗದಿ ಮಾಡಿದ್ದಾರೋ ಇಲ್ಲವೋ? 2,500 ರೂಪಾಯಿ ಬೆಲೆ ಘೋಷಣೆ ಮಾಡಿದರು. Further ಅದರ implementation ಏನಾಗಿದೆ ಎನ್ನುವುದನ್ನು ಸರ್ಕಾರ ಹೇಳಬೇಕಾಗಿದೆ 15 ದಿವಸದ ಹಿಂದೆ 2,500 ರೂ ಗಳ ಬೆಲೆ ನಿಗದಿ ಮಾಡಿ 23ನೇ ತಾರೀಖು ಸರಿ ಹೋಗುವಂತಹ ಸಂದರ್ಭದಲ್ಲಿ ಅಧಿಸೂಚನೆಯನ್ನು ಹೊರಡಿಸುತ್ತಾರೆ ಎಂದರೆ ಎಷ್ಟು ನಿರ್ಲಕ್ಷ್ಯ ತೋರಿಸುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಮಂಡ್ಯ ಭಾಗದ ರೈತರು ಇರಬಹುದು, ಬಿಜಾಪುರ, ಬಾಗಲಕೋಟೆ, ಬೆಳಗಾವಿ ಭಾಗದ ಇರಬಹುದು, ಎಲ್ಲಾ ಕಡೆ ಕಬ್ಬು

ಬೆಳೆಗಾರರು ಹೋರಾಟ ಮಾಡುತ್ತಿದ್ದಾರೆ. ಅವರಿಗೆ ಆ ದರವನ್ನೂ ಕೊಡುತ್ತಿಲ್ಲ, ಮುಂದೆ ಕಬ್ಬು ನುರಿಸುಯುವಂತಹ ಕಾರ್ಯ factory ಅವರು ಮಾಡಿಲ್ಲ ಈ ಒಂದು ಪರಿಸ್ಥಿತಿ ಇದೆ. ಇದರ ಬಗ್ಗೆ detail ಆಗಿ ಚರ್ಚೆ ಮಾಡಬೇಕಾಗಿದೆ. ಇನ್ನೂ ಹಲವಾರು ವಿಚಾರಗಳನ್ನು ಹೇಳಬೇಕಾಗಿದೆ. ಕಬ್ಬು ಬೆಳೆಗಾರರ ಸಂಕಷ್ಟವನ್ನು ಹೇಳಬೇಕಾಗಿದೆ. ಬಹಳ ದೊಡ್ಡ ಪ್ರಮಾಣದ ಚರ್ಚೆಯನ್ನು ನಾವು ಮಾಡಬೇಕಾಗಿದೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಕು ಮತ್ತು ಸರ್ಕಾರ ಇದಕ್ಕೆ ಸ್ಪಂದನೆ ಮಾಡಬೇಕು.ಈ ಕಡೆ factoryಯೂ ಪ್ರಾರಂಭ ವಾಗಿಲ್ಲ ಕಬ್ಬು ಬೆಳೆಗಾರರು ಬೀದಿಯಲ್ಲಿ ಬಿದ್ದಿದ್ದಾರೆ. ಅದಕ್ಕೆ ಚರ್ಚೆಗೆ ದಯವಿಟ್ಟು ಅವಕಾಶವನ್ನು ಕೊಡಬೇಕು. ನಿಲುವಳಿ ಸೂಚನೆಯನ್ನು ಸ್ಪಷ್ಟವಾಗಿ ನಾವು ಕಬ್ಬು ಬೆಳೆಗಾರರ ಬಗ್ಗೆ ಕೊಟ್ಟಿದ್ದೇವೆ. ಮಾನ್ಯ ಕುಮಾರಸ್ವಾಮಿಯವರು ತಮ್ಮ ನಿಲುವಳಿ ಸೂಚನೆಯಲ್ಲಿ ಹಲವಾರು ವಿಚಾರಗಳನ್ನು ಹೇಳಿದ್ದಾರೆ Specific ಆಗಿ ಕಬ್ಬಿನ ಬಗ್ಗೆ, ಬೆಂಬಲ ಬೆಲೆಯ ಬಗ್ಗೆಯೂ ಇದೆ. ನಮ್ಮ ನಿಲುವಳಿ ಸೂಚನೆ ಸ್ಪಷ್ಟವಾಗಿ ಕಬ್ಬು ಬೆಳೆಗಾರರ ಬಗ್ಗೆ ಇರುವಂಥದ್ದು. ಅದಕ್ಕೆ ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತಿದ್ದೇನೆ.

(ಗೊಂದಲ)

**ಶ್ರೀ ವೈ.ಎಸ್.ವಿ.ದತ್ತ:** ಮಾನ್ಯ ಅಧ್ಯಕ್ಷರೆ. . . . .

(ಗೊಂದಲ)

**ಅಧ್ಯಕ್ಷರು:** ಇದನ್ನು ನಿಯಮ 69 ಕ್ಕೆ conversionಮಾಡಲಾಗಿದೆ ಚರ್ಚೆಗೆ ತೆಗೆದುಕೊಳ್ಳೋಣ. ಮಾನ್ಯ ಜಗದೀಶ್ ಶೆಟ್ಟರ್‌ರವರೆ ತಾವು ಎತ್ತಿದ ಪ್ರಶ್ನೆ ಯನ್ನು 69 ಕ್ಕೆ convert ಮಾಡಲಾಗಿದೆ.

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ** (ಮಾನ್ಯ ಕಾನೂನು ಸಚಿವರು). ಮಾನ್ಯ ಅಧ್ಯಕ್ಷರೆ, ಎರಡನ್ನೂ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳೋಣ.

(ಗೊಂದಲ)

**ಅಧ್ಯಕ್ಷರು:** ವಿಷಯ ಬೇರೆ ಬೇರೆ ಇದೆ.

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:** ಕಬ್ಬಿನ ವಿಷಯ ಹಾಗೂ ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ.

(ಗೊಂದಲ)

**ಶ್ರೀ ವೈ.ಎಸ್ ವಿ.ದತ್ತ:** ತೆಂಗಿನ ಬೆಳೆ ಬಗ್ಗೆ ಇದೆ.

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:** ಅದಕ್ಕೆ ಬೇರೆ ಬೇರೆ ಚರ್ಚೆಯಾಗುವುದು ಬೇಡ. ಒಂದು ನಿಲುವಳಿ ಸೂಚನೆಯಲ್ಲಿ ಕಬ್ಬಿನ ವಿಷಯವಾಗಿ ಮಾತ್ರ ಪ್ರಸ್ತಾಪ ಮಾಡಿದ್ದಾರೆ. ಇನ್ನೊಂದರಲ್ಲಿ ಕಬ್ಬೂ ಸೇರಿದಂತೆ ಬೇರೆ ಬೇರೆ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಎರಡೂ ಸೇರಿ ರೂಲ್ 69ಗೆ convert ಮಾಡಿದರೆ ಸಮಯ ಉಳಿಯುತ್ತದೆ ಬೆಳಗಾವಿಯಲ್ಲಿ ಅಧಿವೇಶನ ನಡೆಸುವುದಕ್ಕೆ ಕೇವಲ 10 ದಿವಸಗಳ ಕಾಲಾವಕಾಶ ಇದೆ. ಇನ್ನೂ ಸಾಕಷ್ಟು ಪ್ರಮುಖವಾದ ವಿಚಾರ ಗಳನ್ನು ಚರ್ಚೆ ಮಾಡಬೇಕಾಗಿದೆ. ಆ ಕಾರಣಕ್ಕೋಸ್ಕರ ಎರಡನ್ನೂ club ಮಾಡಿ

(ಗೊಂದಲ)

**ಶ್ರೀ ವೈ.ಎಸ್ ವಿ.ದತ್ತ:** ಮಾನ್ಯ ಅಧ್ಯಕ್ಷರೆ 10 ದಿವಸ ಕಾಲಾವಕಾಶ ಇದೆ ನಿಜ. ಇವತ್ತು ಪ್ರಾರಂಭದಲ್ಲಿ ಬೆಳಗಾಂನಲ್ಲಿ ಶಾಸಕರು, ಮಂತ್ರಿಗಳು ಅಧಿವೇಶನಕ್ಕೆ ಬರದ ಹಾಗೆ ರೈತರು ಇಡೀ ಬೆಳಗಾಂನಲ್ಲಿ ಎಲ್ಲಾ ಸರ್ಕಲ್ ಗಳಲ್ಲಿ ಅಡ್ಡಿ ಮಾಡಿದ್ದಾರೆ ಎಂದರೆ ಪರಿಸ್ಥಿತಿ ಎಷ್ಟರ ಮಟ್ಟಿಗೆ ಗಂಭೀರವಾಗಿದೆ, ನಮ್ಮಗಳ ಮೇಲೆ ಎಷ್ಟರ ಮಟ್ಟಿಗೆ ಆಕ್ರೋಶವಿದೆ ಎನ್ನುವು ಬಹಳ ಮುಖ್ಯ

(ಗೊಂದಲ)

**ಅಧ್ಯಕ್ಷರು:** ಮಾನ್ಯ ಜಯಚಂದ್ರರವರೆ, ಮಾನ್ಯ ಕುಮಾರಸ್ವಾಮಿ ಯವರು ಪ್ರಸ್ತಾಪ ಮಾಡಿರುವುದೇ ಬೇರೆ ವಿಷಯ. ಮಾನ್ಯ ಜಗದೀಶ್ ಶೆಟ್ಟರ್‌ರವರು ಪ್ರಸ್ತಾಪ ಮಾಡಿರುವುದೇ ಬೇರೆ ವಿಷಯ ಎರಡೂ ಪ್ರತ್ಯೇಕವಾಗಿ ಚರ್ಚೆ ಮಾಡಿದರೆ specific ಆಗಿ ಉತ್ತರ ಹೇಳಲು ಅವಕಾಶ ವಾಗುತ್ತದೆ. ಎರಡೂ mix ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ ಏಕೆಂದರೆ ಇವೆಲ್ಲಾ major issues ಆದ್ದರಿಂದ specific ಆಗಿ ಉತ್ತರ ಹೇಳಲು ಅವಕಾಶವಾಗುತ್ತದೆ. ಒಂದೆರಡು ಗಂಟೆ ಹೆಚ್ಚಿಗೆ ಚರ್ಚೆ ಮಾಡಿದರೆ ಏನೂ ತೊಂದರೆ ಆಗುವುದಿಲ್ಲ. ಒಟ್ಟಿನಲ್ಲಿ ಸಮಸ್ಯೆ ಬಗೆಹರಿಯಬೇಕು. ಚರ್ಚೆಗ ಅವಕಾಶ ಆಗಬೇಕು. ಅದನ್ನು ಮಾಡೋಣ.

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:** ಮಾನ್ಯ ಅಧ್ಯಕ್ಷರೆ, ನಾವು ಚರ್ಚೆಗೆ ವಿರೋಧ ವಿಲ್ಲ. ಆದರೆ ಕಾಲದ ಮಿತಿಗೆ ಅನುಗುಣವಾಗಿ ಒಟ್ಟಿಗೆ ಚರ್ಚೆ ಮಾಡಿದರೆ ಅನುಕೂಲವಾಗುತ್ತದೆ. ಆದರೆ ನಾವು ಎಲ್ಲಾ ವಿಚಾರಗಳಿಗೂ ಉತ್ತರ ಕೊಡಲು ಸಮರ್ಥರಿದ್ದೇವೆ.

(ಗೊಂದಲ)

**ಶ್ರೀ. ಟಿ.ಬಿ.ಜಯಚಂದ್ರ:** ಮಾನ್ಯ ಅಧ್ಯಕ್ಷರೆ, ಚರ್ಚೆಗೆ ಕಾಲವನ್ನು ನಿಗದಿ ಮಾಡುವ ವಿಚಾರವನ್ನು ತಮಗೇ ಬಿಟ್ಟಿದ್ದೇವೆ. ಮುಕ್ತವಾದ ಚರ್ಚೆ ಮಾಡಲು, ಉತ್ತರ ಕೊಡಲು ಸರ್ಕಾರ ತಯಾರಿದೆ.

(ಗೊಂದಲ)

**ಅಧ್ಯಕ್ಷರು:** ಆಯಿತು.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:** ಮಾನ್ಯ ಅಧ್ಯಕ್ಷರೆ, ರೂಲ್ 69ನಲ್ಲಿ ಒಂದು ನಿರ್ದಿಷ್ಟವಾದಂತಹ ವಿಷಯದ ಮೇಲೆ ಚರ್ಚೆ ಎಂದು ಹೇಳಲಾಗಿದೆ. ಅದಕ್ಕೆ ನಮಗೆ ಅವಕಾಶ ಕೊಡಿ ಎಂದು ಕೇಳುತ್ತಿದ್ದೇವೆ.

(ಗೊಂದಲ)

**ಅಧ್ಯಕ್ಷರು:** ಈಗಾಗಲೇ ಚರ್ಚೆಗೆ ಅವಕಾಶ ಕೊಡಲಾಗುವುದು ಎಂದು ಹೇಳಿದ್ದೇನೆ. ಮತ್ತೆ ಅದೇ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ಅವಕಾಶ ಕೊಡುತ್ತೇನೆ.

(ಗೊಂದಲ)

**ಶ್ರೀ ಗೋವಿಂದ ಎಂ.ಕಾರಜೋಳ:** ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಕಬ್ಬು ಬೆಳೆಗಾರರ ಸಂಖ್ಯೆ ಬಹಳಷ್ಟಿದೆ.

(ಗೊಂದಲ)

**ಅಧ್ಯಕ್ಷರು:** ಅವರು ಹೇಳಿದ್ದಾರೆ.

(ಗೊಂದಲ)

**ಶ್ರೀ ಗೋವಿಂದ ಎಂ.ಕಾರಜೋಳ:** ನಾನು ಹೇಳಿದ್ದೇ ಬೇರೆ. ಅವರು ಹೇಳಿದ್ದೇ ಬೇರೆ.

(ಗೊಂದಲ)

**ಅಧ್ಯಕ್ಷರು:** ಈಗ ವಿಷಯ ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿದ್ದೇನೆ. ಅಲ್ಲಿ ನೀವೂ ಭಾಗವಹಿಸಿ ಮಾತನಾಡಿ.

(ಗೊಂದಲ)

**ಶ್ರೀ ಗೋವಿಂದ ಎಂ.ಕಾರಜೋಳ:** ನಾನು ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಹೇಳುತ್ತಿದ್ದೇನೆ.

(ಗೊಂದಲ)

**ಅಧ್ಯಕ್ಷರು:** ಈಗ ಅವರು ಯಾವ ಬೆಳೆಗಾರರ ವಿಚಾರದಲ್ಲಿ ಪ್ರಸ್ತಾಪ ಮಾಡಿದರು?

(ಗೊಂದಲ)

**ಶ್ರೀ ಗೋವಿಂದ ಎಂ.ಕಾರಜೋಳ:** ನಮ್ಮ ಕ್ಷೇತ್ರದಲ್ಲಿಯೇ ಕಬ್ಬು ಬೆಳೆಗಾರರ ಸಮಸ್ಯೆ ಹೆಚ್ಚು ಇದೆ. ಕಾರ್ಖಾನೆಗಳು ಇರುವುದು ನಮ್ಮಲ್ಲಿಯೇ ನನಗೆ ಮಾತನಾಡಲು ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ದಯವಿಟ್ಟು ನನಗೆ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

**ಅಧ್ಯಕ್ಷರು:** ಅವಕಾಶ ಕೊಡುತ್ತೇನೆ ಎಂದು ಹೇಳಿದೆನಲ್ಲಾ?

(ಗೊಂದಲ)

**ಶ್ರೀ ಗೋವಿಂದ ಎಂ.ಕಾರಜೋಳ:** ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಕಬ್ಬು ಬೆಳೆಗಾರರ ಸಮಸ್ಯೆ ಇಂದು ನಿನ್ನೆಯದಲ್ಲ. ಕಳೆದ 40 ವರ್ಷಗಳಿಂದ ವೈಜ್ಞಾನಿಕ ಬೆಲೆ ಬೇಕು ಎಂದು ರೈತರು ಹೋರಾಟ ಮಾಡುತ್ತಿದ್ದಾರೆ. ಕಳೆದ ವರ್ಷ SAP ಕಾನೂನನ್ನು ಜಾರಿಗೆ ಮಾಡಿದ್ದೀರಿ. ಕಾನೂನಿನಲ್ಲಿ ಎನು ಅವಕಾಶ ಮಾಡಿಕೊಟ್ಟಿದ್ದೀರಿ?

(ಗೊಂದಲ)

**ಅಧ್ಯಕ್ಷರು:** ಅವೆಲ್ಲವನ್ನೂ ಚರ್ಚೆ ಮಾಡುವಾಗ ಹೇಳಿ.

(ಗೊಂದಲ)

**ಶ್ರೀ ಗೋವಿಂದ ಎಂ.ಕಾರಜೋಳ:** ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ.

(ಗೊಂದಲ)

**ಅಧ್ಯಕ್ಷರು:** ಅನಂತರ ಮಾತನಾಡಿ.

(ಗೊಂದಲ)

**ಶ್ರೀ ಗೋವಿಂದ ಎಂ.ಕಾರಜೋಳ:** ಅಕ್ಟೋಬರ್ ಒಂದನೇ ತಾರೀಖಿಗೆ, ಕಾರ್ಖಾನೆ ಪ್ರಾರಂಭವಾಗುವುದಕ್ಕೆ ಮುಂಚೆ ಅವರು ಮಾಡಬೇಕಾಗಿತ್ತು ಮೂರು ಬಾರಿ ಮಾಡಲು ಅವಕಾಶವಿತ್ತು.

(ಗೊಂದಲ)

**ಅಧ್ಯಕ್ಷರು:** ಆಯಿತು, ಅವರು ಹೇಳುತ್ತಾರೆ

(ಗೊಂದಲ)

**ಶ್ರೀ ಗೋವಿಂದ ಎಂ.ಕಾರಜೋಳ:** ಈ ರೀತಿ ಮಾಡಿದರೆ ಹೇಗೆ? ಸರ್ಕಾರವೇ ಇಲ್ಲ, ಸರ್ಕಾರ ಸತ್ತು ಹೋಗಿದೆ.

(ಗೊಂದಲ)

**ಅಧ್ಯಕ್ಷರು:** ಎರಡೂ ನಿಲುವಳಿ ಸೂಚನೆಯನ್ನು ಇವತ್ತೇ ಚರ್ಚೆಗೆ ತೆಗೆದುಕೊಳ್ಳೋಣ

(ಗೊಂದಲ)

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:** ಮಾನ್ಯ ಜಗದೀಶ್ ಶೆಟ್ಟರ್‌ರವರೂ particular ಆಗಿ ಕಬ್ಬು ಬೆಳೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾವೂ ಕಬ್ಬಿನ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಎರಡನ್ನೂ joint ಆಗಿ ಚರ್ಚೆಗೆ ತೆಗೆದುಕೊಂಡರೂ ಪರವಾಗಿಲ್ಲ. ಬೇರೆ ಬೇರೆ ಆಗಿ, ಬೇರೆ ಬೇರೆ ಬೆಳೆ ಬಗ್ಗೆ ಚರ್ಚೆಗೆ ತೆಗೆದುಕೊಂಡರೂ ಪರವಾಗಿಲ್ಲ ಅಥವಾ ಕಬ್ಬಿನ ಬಗ್ಗೆ ನಿರ್ದಿಷ್ಟವಾಗಿ ಚರ್ಚೆ ಮಾಡಿ ಅದಕ್ಕೆ ಇನ್ನೊಂದು ದಿವಸ ಸಮಯ ಕೊಟ್ಟರೆ ಇನ್ನೊಂದು ನಿಲುವಳಿ ಸೂಚನೆಯನ್ನು ಕೊಡುತ್ತೇವೆ.

(ಗೊಂದಲ)

**ಅಧ್ಯಕ್ಷರು:** ಇವತ್ತು ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟು ಚರ್ಚೆ ಮಾಡೋಣ.

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:** ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಂಡರೆ ಅದಕ್ಕೆಲ್ಲವುಗಳಿಗೂ ಇದರಲ್ಲಿ ಪರಿಹಾರವಿದೆ. ದಯವಿಟ್ಟು ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ನಂತರ ರೂಲ್ 69ರ ಅಡಿಯಲ್ಲಿ ತೆಗೆದುಕೊಳ್ಳಬಹುದು.

(ಗೊಂದಲ)

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:** ನೀವು ಪ್ರಶ್ನೋತ್ತರ ವಿಷಯವನ್ನು ಚರ್ಚೆ ಮಾಡಿದರೆ, ನೀವು ಅನವಶ್ಯಕವಾಗಿ ಬಾರದ ಉತ್ತರವನ್ನು ಕೊಡುತ್ತೀರಿ ಉತ್ತರಗಳು ಸರಿಯಾದ ರೀತಿಯಲ್ಲಿ ದೊರಕುವುದಿಲ್ಲ.

(ಗೊಂದಲ)

**ಅಧ್ಯಕ್ಷರು:** ಕೆಲವು ಪ್ರಶ್ನೆಗಳು ಮುಖ್ಯವಾಗಿರುತ್ತವೆ.

(ಗೊಂದಲ)

**ಶ್ರೀ ಹೆಚ್.ಡಿ.ರೇವಣ್ಣ:** ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರದ ಬಗ್ಗೆ ಬಿಡಿ. ರೈತರ ಬಗ್ಗೆ ಕಾಳಜಿ ವಹಿಸಿ. ನಿಯಮ 69 ರಲ್ಲಿ ಕಬ್ಬಿನ ಬೆಳೆ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ.

(ಗೊಂದಲ)

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:** ಈ ವಿಷಯಗಳನ್ನು ಪ್ರಶ್ನೋತ್ತರ ಮೂಲಕ ತರುವುದಕ್ಕೆ ಆಗುವುದಿಲ್ಲ.

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ:** ಅಡಿಕೆ, ಮೆಣಸು, ಏಲಕ್ಕಿ ಬೆಳೆಗಳು ಮಳೆಯಿಂದಾಗಿ ನಷ್ಟವಾಗಿದೆ. ಸರ್ಕಾರ ಯಾವುದೇ ಕ್ರಮವನ್ನು ತೆಗೆದು ಕೊಂಡಿಲ್ಲ. ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಿ.

(ಗೊಂದಲ)

**ಅಧ್ಯಕ್ಷರು:** ಬೇಗ ಪ್ರಶ್ನೆಗಳನ್ನು ಪೂರೈಸಿಕೊಳ್ಳೋಣ. ಕಬ್ಬಿನ ಬಗ್ಗೆ Complete ಆಗಿ ಚರ್ಚೆ ಮಾಡೋಣ

(ಗೊಂದಲ)

**ಶ್ರೀ ಉಮೇಶ್ ವಿ.ಕತ್ತಿ:** ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಅತಿ ಹೆಚ್ಚು ಕಬ್ಬು ಬೆಳೆಗಾರರು ಮತ್ತು ಅತಿ ಹೆಚ್ಚು ಕಬ್ಬು ಬೆಳೆಯುವಂತಹ ಭಾಗ ಬೈಲಹೊಂಗಲ ಮತ್ತು ಬಾಗಲಕೋಟೆಯಾಗಿದೆ.

**ಅಧ್ಯಕ್ಷರು:** ಹೌದು, ಅತಿ ಹೆಚ್ಚು ಇಳುವರಿ ಇರುವಂತಹ ಭಾಗ ಇಲ್ಲಿದೆ.

**ಶ್ರೀ ಉಮೇಶ್ ವಿ.ಕತ್ತಿ:** ತಾವು ಪ್ರಶ್ನೋತ್ತರವನ್ನು ಬದಿಗಿಟ್ಟು ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು.

**ಅಧ್ಯಕ್ಷರು:** ನೀವು ಕಬ್ಬು ಬೆಳೆಯುವವರು ಪರವಾಗಿಯೋ ಅಥವಾ ಕಬ್ಬು ಅರೆದುಕೊಂಡು ತಿನ್ನುವವರ ಪರವಾಗಿ ವಾದ ಮಾಡುವವರಿದ್ದೀರಾ?

**ಶ್ರೀ ಉಮೇಶ್ ವಿ.ಕತ್ತಿ:** ನಾನು ಕಬ್ಬು ಬೆಳೆಗಾರನೂ ಹೌದು, ಕಾರ್ಖಾನೆಯ ಮಾಲೀಕನೂ ಹೌದು, ರೈತರ ಜೊತೆಯಲ್ಲಿ ಇರುವ ವ್ಯಕ್ತಿಯೂ ಹೌದು.

**ಅಧ್ಯಕ್ಷರು:** ಈಗ Question Hour ತೆಗೆದುಕೊಳ್ಳೋಣ. ಪ್ರಶ್ನೋತ್ತರವನ್ನು ಬೇಗಬೇಗನೆ ಪೂರೈಸಿಬಿಡೋಣ. ಇಲ್ಲಿ ಒಳ್ಳೆಯ ಪ್ರಶ್ನೆಗಳು ಇವೆ.

**ಶ್ರೀ ಹೆಚ್ ಡಿ.ರೇವಣ್ಣ:** ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆಗಾರರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು.

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ, ಖಂಡಿತವಾಗಿ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ಹೆಚ್.ಡಿ ರೇವಣ್ಣ:** ಮಾನ್ಯ ಅಧ್ಯಕ್ಷರೆ, Question Hour ಅನ್ನು ತೆಗೆದುಹಾಕಿ, ಇದು ಅಂತಹ ವಿಶೇಷ ಇಲ್ಲ.

**ಅಧ್ಯಕ್ಷರು:** ಮಾನ್ಯ ರೇವಣ್ಣನವರೆ, ತಾವು ಊಟ ಮಾಡಿಕೊಂಡು ಬರುತ್ತೀರಾ ಅಥವಾ ಇಲ್ಲವಾ?

**ಶ್ರೀ ಹೆಚ್.ಡಿ.ರೇವಣ್ಣ:** ನಾನು correct time ಗೆ ಊಟ ಮಾಡಿಕೊಂಡು ಇಲ್ಲಿಗೆ ಬಂದಿರುತ್ತೇನೆ.

**ಅಧ್ಯಕ್ಷರು:** ಮಾನ್ಯ ರೇವಣ್ಣನವರಿಗೆ ಬೇಗ ಹಸಿವು ಆಗುತ್ತಿರಬಹುದು. ಈಗ ಮೊದಲು ಶ್ರೀ ರಾಜೀವ್‌ರವರ ಪ್ರಶ್ನೆ1(165)ಕ್ಕೆ ಕಾಲಾವಕಾಶ ಕೇಳಿರುವುದರಿಂದ ಮುಂದೆ ಹೋಗಿದೆ ಶ್ರೀ ಗೋಪಾಲಯ್ಯನವರ ಪ್ರಶ್ನೆ ಸಂಖ್ಯೆ:2(121) . . .

**ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):** ಮಾನ್ಯ ಅಧ್ಯಕ್ಷರೆ, ನಾನು ತಮಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ ತಾವು ನನಗೆ ಒಂದು ನಿಮಿಷಗಳ ಕಾಲಾವಕಾಶವನ್ನು ಕೊಟ್ಟರೆ ನಾನು ಪ್ರಸ್ತಾಪ ಮಾಡುತ್ತೇನೆ ನಾನು ನಿಯಮಾವಳಿ ಪ್ರಕಾರ ಸಮಯಕ್ಕೆ ಸರಿಯಾಗಿ ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ನಿಮ್ಮಲ್ಲಿ ನನ್ನದು ಎರಡು ವಿನಂತಿ ಇದೆ. ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಕರ್ನಾಟಕ ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಈ ಮನೆಯಲ್ಲಿ ಚರ್ಚೆ ಯಾಗಬೇಕಾಗಿದೆ.

**ಅಧ್ಯಕ್ಷರು:** ಮಾನ್ಯ ಯಡಿಯೂರಪ್ಪನವರೆ, ಅದು ಆಗುವುದಿಲ್ಲ. ನೀವು ಹೇಳಿದ್ದೇ ಹೇಳುತ್ತಾ ಇದ್ದರೆ ಹೇಗೆ?

**ಶ್ರೀ ಬಿ.ಎಸ್.ಯಡಿಯೂರಪ್ಪ:** ನಾನು ಹಗಲು ಮತ್ತು ರಾತ್ರಿ ಇಲ್ಲಿ ಏತಕ್ಕಾಗಿ ಕುಳಿತುಕೊಳ್ಳಬೇಕು?

**ಅಧ್ಯಕ್ಷರು:** ನೀವು ಕುಳಿತುಕೊಳ್ಳಿ.

(ಈ ಹಂತದಲ್ಲಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ಕಾಗದಪತ್ರವನ್ನು ಹರಿದು ಸದನದ ಬಾವಿಗೆ ಧರಣಿ ಮಾಡಲು ಆಗಮಿಸಿದರು.)

**Mr SPEAKER:** Don't threat ಏನಿದು? ಒಬ್ಬ ಮಾಜಿ ಮುಖ್ಯ ಮಂತ್ರಿಯಾಗಿ ನಡೆದುಕೊಳ್ಳುವ ನಡವಳಿಕೆ ಇದೇನಾ? ನೀವು ಬೇರೆಯವರಿಗೆ ಉದಾಹರಣೆಯಾಗಿರಬೇಕು. ಸಮಯ ಕೊಡುತ್ತೇನೆ ತಾವು ತಮ್ಮ ಆಸನದಲ್ಲಿ ಕುಳಿತುಕೊಳ್ಳಬೇಕು

(ಗೊಂದಲ)

(ಶ್ರೀ ಬಿ.ಎಸ್ ಯಡಿಯೂರಪ್ಪನವರು ಬಾವಿಯಿಂದ ಮಾತನಾಡುತ್ತಿದ್ದರು.)

**ಅಧ್ಯಕ್ಷರು:** Please, Please, ಮಾಡಬೇಕಾಗುತ್ತದೆ ಓಹೋ, ಅದಕ್ಕೆ ವಿಧಿ ವಿಧಾನ ಇಲ್ಲವೇ? ನೀವು ನಿಮ್ಮ ಸ್ಥಾನದಲ್ಲಿ ಕುಳಿತುಕೊಂಡು ಮಾತ ನಾಡಿ. ಮಾತನಾಡುವುದಕ್ಕೆ ನಿಮಗೆ ಅವಕಾಶ ಕೊಡುವುದಿಲ್ಲವೆಂದು ಯಾರು ಹೇಳಿದ್ದಾರೆ? ಈ ರೀತಿಯಾಗಿ ತಾವು ಹೆದರಿಸಬೇಡಿ. ತಮ್ಮ ಸ್ಥಾನಕ್ಕೆ ಬಂದು ತಾವು ಮಾತನಾಡಿ.

**ಶ್ರೀ ಆರ್.ಅಶೋಕ್:** ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರ submission ಮಾಡುತ್ತಿದ್ದರು. ಅವರು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

(ಈ ಹಂತದಲ್ಲಿ ಶ್ರೀ ಬಿ ಎಸ್.ಯಡಿಯೂರಪ್ಪನವರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು.)

**ಅಧ್ಯಕ್ಷರು:** ನನಗೂ ಕೂಡ ಜವಾಬ್ದಾರಿ ಇದೆ.

**ಶ್ರೀ ಜಗದೀಶ್ ಶೆಟ್ಟರ್:** ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿ ಯೂರಪ್ಪನವರು 5 ನಿಮಿಷ submission ಮಾಡುವುದಕ್ಕೆ ಅವಕಾಶವನ್ನು ಕೊಡಿ.

**ಅಧ್ಯಕ್ಷರು:** ನಾನು ಹೊಸದಾಗಿ ಸದನಕ್ಕೆ ಬಂದಿಲ್ಲ. ನಿಮಗೆ ಮಾತ ನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಆದರೆ ತಾವು ತಮ್ಮ ಸ್ಥಾನದಲ್ಲಿ ಹೋಗಿ ಕುಳಿತುಕೊಳ್ಳಬೇಕು.

**ಶ್ರೀ ಜಗದೀಶ್ ಶೆಟ್ಟರ್:** ಸನ್ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಾವು ಶಾಂತರಾಗಿರಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** ಮಾನ್ಯ ಯಡಿಯೂರಪ್ಪನವರು ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡುವ ಬಗ್ಗೆ ತಮಗೆ ಕಳುಹಿಸಿರುವು ದರಿಂದ ಅವರು ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

**ಅಧ್ಯಕ್ಷರು:** ನಾನು ಅವರಿಗೆ ತಮ್ಮ ಸ್ಥಾನದಲ್ಲಿ ಕುಳಿತುಕೊಂಡು ಮಾತನಾಡಿ ಎಂದು ಹೇಳಿದ್ದೇನೆ.

(ಗೊಂದಲ)

**ಶ್ರೀ ಜಗದೀಶ್ ಶೆಟ್ಟರ್:** ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ಶಾಂತರಾಗಿರಬೇಕು.

(ಗೊಂದಲ)

**ಅಧ್ಯಕ್ಷರು:** ನಾನು ಅವರಿಗೆ ತಮ್ಮ ಸ್ಥಾನದಲ್ಲಿ ಕುಳಿತುಕೊಂಡು ನಂತರ ಮಾತನಾಡಿ ಎಂದು ಹೇಳಿದ್ದೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** ಮಾನ್ಯ ಅಧ್ಯಕ್ಷರೆ, ಅವರು ಮಾತನಾಡುವ ಬಗ್ಗೆ ತಾವು ಒಪ್ಪಿಕೊಂಡಿದ್ದೀರಿ.

**ಅಧ್ಯಕ್ಷರು:** ಮೊದಲು ಬಂದಿದ್ದು ಇವರದ್ದು.

(ಗೊಂದಲ)

**ಶ್ರೀ ಹೆಚ್.ಡಿ.ರೇವಣ್ಣ:** ಮಾನ್ಯ ಅಧ್ಯಕ್ಷರೆ, ಇವರು 5 ವರ್ಷಗಳ ಕಾಲ ಜ್ವಲಂತ ಸಮಸ್ಯೆಗಳ ಬಗ್ಗೆ ಆಡಳಿತವನ್ನು ಮಾಡಿರುವುದನ್ನು ನಾವು ನೋಡಿಲ್ಲವೇ?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** ಮಾನ್ಯ ಯಡಿಯೂರಪ್ಪನವರು ಪ್ರತ್ಯೇಕ ನಿಲುವಳಿ ಸೂಚನೆಯನ್ನು ಕೊಟ್ಟಿರುವುದರಿಂದ ತಾವು ಅವರು ಮಾತನಾಡುವುದಕ್ಕೆ ಒಪ್ಪಿಕೊಂಡಿರುವುದರಿಂದ ಅವರು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಡಿ.

**ಶ್ರೀ ಹೆಚ್ ಡಿ.ರೇವಣ್ಣ:** ಇವರು ಕಳೆದ 5 ವರ್ಷದಿಂದ ರಾಜ್ಯದಲ್ಲಿ ಆಡಳಿತ ಮಾಡುವಾಗ ಜ್ವಲಂತ ಸಮಸ್ಯೆ ಇರಲಿಲ್ಲವೇ? ಈಗ ಇವರಿಗೆ 6 ತಿಂಗಳಲ್ಲಿಯೇ ಜ್ವಲಂತ ಸಮಸ್ಯೆ ಬಂದು ಬಿಟ್ಟಿದೆ.

**ಅಧ್ಯಕ್ಷರು:** ಮೊದಲು ಯಾರು ನಿಲುವಳಿ ಸೂಚನೆಯನ್ನು ಕೊಡುತ್ತಾರೋ ಅವರದನ್ನು ಮೊದಲು ತೆಗೆದುಕೊಳ್ಳಬೇಕು.

**ಶ್ರೀ ಖಮರುಲ್ಲಾ ಇಸ್ಲಾಂ (ಹಜ್ ಮತ್ತು ವಕ್ಫ್ ಸಚಿವರು):** ಇದು ಸದನಕ್ಕೆ ತೋರುವ ಮರ್ಯಾದೆಯೇ?

(ಗೊಂದಲ)

**ಅಧ್ಯಕ್ಷರು:** ನಿಮಗೆ ವಿಧಿವಿಧಾನ ಗೊತ್ತಿಲ್ಲ.

**ಶ್ರೀ ಖಮರುಲ್ಲಾ ಇಸ್ಲಾಂ (ಹಜ್ ಮತ್ತು ವಕ್ಫ್ ಸಚಿವರು):** ಸದನಕ್ಕೆ ಮರ್ಯಾದೆ ಇಲ್ಲವೇ? ಇವರು ಮಾಜಿ ಮುಖ್ಯಮಂತ್ರಿಗಳಾಗಿದ್ದಾರೆ. ಹೌದು, ಇಲ್ಲವೆಂದು ಹೇಳಿಲ್ಲ.

**ಶ್ರೀ ಹೆಚ್.ಡಿ.ರೇವಣ್ಣ:** ನೀವು ಕಳೆದ 5 ವರ್ಷಗಳಿಂದ ಆಡಳಿತವನ್ನು ಮಾಡಿದ್ದೀರಲ್ಲಾ, ಆಗ ಕಬ್ಬುಬೆಳೆಗಾರರ ಸಮಸ್ಯೆಯ ಬಗ್ಗೆ ಏನು ಮಾಡಿದ್ದೀರಿ?

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ):** ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಈ ರೀತಿಯ ನಡವಳಿಕೆ ಮತ್ತು ಸದನದ ಗೌರವಕ್ಕೆ ಚ್ಯುತಿ ತರುವಂತಹ ರೀತಿಯಲ್ಲಿದೆ. ನಿಮ್ಮ ಪೀಠಕ್ಕೆ ಅಗೌರವವಾಗುತ್ತಿದೆ, ಇದು ಸರಿಯಲ್ಲ. ಈ ಸದನದಲ್ಲಿ ರಚನೆಯಾಗಿರುವ ಈ ನಿಯಮಾವಳಿ ಪುಸ್ತಕಕ್ಕೆ ಬೆಲೆ ಇಲ್ಲ

ಅಂದರೆ ನಾನು ಈ book ಅನ್ನು ಹರಿದುಹಾಕುತ್ತೇನೆ. ನಾನು ಈ book ಅನ್ನು ಹರಿದುಹಾಕಬೇಕೇ? ಸದನದಲ್ಲಿ ನಿಯಮಾವಳಿ ಇದೆಯೋ ಅಥವಾ ಇಲ್ಲವೋ ಎಂದು ನಾನು ಕೇಳುತ್ತೇನೆ. ಸದನಕ್ಕೆ ಗೌರವ ಇದೆಯಾ? ಮಾನ್ಯ ಅಧ್ಯಕ್ಷರೆ, ತಾವು ಈ ರೀತಿ ಮಾಡುವವರಿಗೆ ಮಾತನಾಡುವುದಕ್ಕೆ ಅವಕಾಶ ವನ್ನು ಕೊಡಬೇಡಿ.

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಮಾನ್ಯ ಅಧ್ಯಕ್ಷರೆ, ಯಾವುದೇ ನಿಲುವಳಿ ಸೂಚನೆ ಕೊಡಬೇಕಾ ದಾಗ ಸದನ ಪ್ರಾರಂಭವಾಗುವುದಕ್ಕೆ ಒಂದು ಗಂಟೆ ಮುಂಚಿತವಾಗಿ ಕೊಡಬೇಕಾಗುತ್ತದೆ ಇದು ನಿಯಮದಲ್ಲಿರುವಂತಹದ್ದು. ಸನ್ಮಾನ್ಯ ಯಡಿ ಯೂರಪ್ಪನವರು ಕೊಟ್ಟಿರುವಂತಹ ನಿಲುವಳಿ ಸೂಚನೆಯ ತಡವಾಗಿ 10 30 ಗಂಟೆಯ ನಂತರ ಬಂದಿದೆ.

**ಅಧ್ಯಕ್ಷರು:** ನಾನು ಇಲ್ಲಿ ಬರೆದುಕೊಂಡಿರುವುದು ಇದೆಯಲ್ಲಾ?

**ಶ್ರೀ ಟಿ.ಬಿ.ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ನಿಲುವಳಿ ಸೂಚನೆಯು 10.30 ಗಂಟೆಗೆ ತಡವಾಗಿ ಬಂದಿರುವುದರಿಂದ, ಈ ವಿಷಯವನ್ನು ಸಭೆಯ ಗಮನಕ್ಕೆ ತರುವುದಕ್ಕಾಗಿಲ್ಲ. ಈಗ ಇಲ್ಲಿ ಗೊಂದಲ ಬೇಡ, ಹಿರಿಯ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡುವ ಬಗ್ಗೆ ಪ್ರಾರಂಭ ಮಾಡಿದರು. ಆ ಬಗ್ಗೆ Speaker ರವರು ನಿರಾಕರಣೆ ಮಾಡಲಿಲ್ಲ. ಆದ್ದರಿಂದ ಮಾತಿನ ಆವೇಶದಲ್ಲಿ ಗೊಂದಲ ಸೃಷ್ಟಿಯಾಗಿದೆ. ದಯಮಾಡಿ ತಾವು ಅವರಿಗೆ ಅವಕಾಶವನ್ನು ಕೊಟ್ಟರೆ ಅವರು ಪ್ರಸ್ತಾಪ ಮಾಡಲಿ.

**ಅಧ್ಯಕ್ಷರು:** ನೀವೇ ಮಾತನಾಡಿ. ಬೇರೆಯವರಿಗೆ ಅವಕಾಶ ಕೊಡು ವುದು ಬೇಡ. ಸದನದಲ್ಲಿ ಇದೇ ವಿಷಯ ಚರ್ಚೆಯಾಗಲಿ. Question Hour ಮುಂದಕ್ಕೆ ಹಾಕಿದ್ದೇನೆ. ಇದೇ ವಿಷಯ ಚರ್ಚೆಯಾಗಲಿ. (ಗೊಂದಲ) ನೀವು defend ಮಾಡಿಕೊಳ್ಳುವ ಸಮಯದಲ್ಲಿ ಏನು ಹೇಳಬೇಕೆಂದಿದ್ದೀರೋ ಅದನ್ನು ಹೇಳಿ. (ಗೊಂದಲ) ಮಾನ್ಯ ಯಡಿಯೂರಪ್ಪನವರೆ, ತಾವು ಏನಾದರೂ

ಹೇಳಬೇಕಾದರೆ ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ ನಿಮಗೆ ಅವಕಾಶ ಕೊಡುತ್ತೇನೆ. ನೀವು ಅಲ್ಲಿಗೆ ಹೋಗಿ ಮಾತನಾಡುವ ಸಂದರ್ಭದಲ್ಲಿ ನಿಮ್ಮ ಕಡೆಯ ಸದಸ್ಯರು ಸದನದ ಬಾವಿಯಲ್ಲಿ ಇರಬಾರದು.

(ಈ ಸಂದರ್ಭದಲ್ಲಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ತಮ್ಮ ಸ್ಥಾನಕ್ಕೆ ತೆರಳಿದರು.)

**ಶ್ರೀ ಬಿ.ಎಸ್.ಯಡಿಯೂರಪ್ಪ** : ನಾನು ಮಾತನಾಡುವಂತಹ ಸಂದರ್ಭದಲ್ಲಿ ನಮ್ಮ ಸದಸ್ಯರು ಸದನದ ಬಾವಿಯಲ್ಲಿಯೇ ಇರುತ್ತಾರೆ.

**ಅಧ್ಯಕ್ಷರು:** No, ಅವರು ಅವರ ಸ್ಥಾನಗಳಿಗೆ ಹೋಗಿ ಕುಳಿತು ಕೊಳ್ಳಬೇಕು

(ಗೊಂದಲ)

(ಈ ಹಂತದಲ್ಲಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ಸದನದ ಬಾವಿಗೆ ಬಂದರು.)

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:** ಇದು ದನದ ಕೊಟ್ಟಿಗೆಯಲ್ಲಾ, ಇದು ವಿಧಾನಸಭೆ ಸದನಕ್ಕೆ ಗೌರವನವನ್ನು ಮೊದಲು ಕೊಡಬೇಕು. ಅಧ್ಯಕ್ಷರ ಮಾತಿಗೆ ಗೌರವ ಕೊಡಬೇಕು.

**ಅಧ್ಯಕ್ಷರು:** ಮಾನ್ಯ ಕಾನೂನು ಸಚಿವರೆ, ನಿಮ್ಮ ಸರ್ಕಾರ ಏನು ಹೇಳುತ್ತದೆಯೋ ಅದನ್ನು ಹೇಳಿ.

**ಶ್ರೀ.ಟಿ.ಬಿ.ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಪ್ರಸ್ತಾಪ ಮಾಡಬೇಕಾಗಿರುವಂತಹ ವಿಷಯಗಳು ಹಲವಾರು ಇದೆ ಅದು ಇಲ್ಲವೆನ್ನುವಂತಹ ಪ್ರಶ್ನೆಯಲ್ಲಾ. ಅದನ್ನು ಮಾಡಬೇಕಾದರೂ ಕೂಡ ಒಂದು ಕ್ರಮ ಇದೆ, ಒಂದು ನೀತಿ ಮತ್ತು ನಿಯಮಗಳು ಇವೆ. ಅವೆಲ್ಲವನ್ನೂ ಬಿಟ್ಟು ಹಿರಿಯ ಸದಸ್ಯರು ಈ

ರೀತಿಯಾಗಿ ಕುಳಿತುಕೊಂಡರೆ ಸದನವನ್ನು ಹೇಗೆ ನಡೆಸುವುದಕ್ಕಾಗುತ್ತದೆ? ದಯಮಾಡಿ ನಾನು ಸರ್ಕಾರದ ಪರವಾಗಿ ವಿನಂತಿಯನ್ನು ಮಾಡುತ್ತೇನೆ ಕಳೆದ 25 ದಿವಸಗಳಿಂದಲೂ ಕೂಡ ನೀವೇನು ಮುಷ್ಕರವನ್ನು ಮಾಡಿದ್ದೀರಿ ಇವೆಲ್ಲವೂ ಕೂಡ ಸರ್ಕಾರಕ್ಕೆ ಗೊತ್ತಿದೆ ಅದು ಯಾವ ಸನ್ನಿವೇಶದಲ್ಲಿ ಅಯಿತು, ಹೇಗಾಯಿತು, ಎಲ್ಲಾ ವಿಚಾರದ ಬಗ್ಗೆಯೂ ನಾವು ಉತ್ತರ ಹೇಳುವುದಕ್ಕೆ ತಯಾರಿದ್ದೇವೆ. ದಯಮಾಡಿ ತಾವು ಕುರ್ಚಿಗೆ ಬೆಲೆ ಕೊಡ ಬೇಕಾಗುತ್ತದೆ. ಇಲ್ಲಿ ಏನಾಗುತ್ತದೆ ಎಂದು ತಾವು ವಿಚಾರದ ಬಗ್ಗೆ ಪ್ರಸ್ತಾಪ ಮಾಡುವಾಗ ನಿಮ್ಮ ಪಕ್ಷದ ಸದಸ್ಯರು ಇಲ್ಲಿ ಸದನದ ಬಾವಿಯಲ್ಲಿರುವುದು ಸಭೆಯು order ನಲ್ಲಿಯ ಇದೆಯಾ? ಇದು ಸದನ ಪ್ರಾರಂಭವಾಗಿರುವ ದಿನವಾಗಿದೆ. ಬೆಳಗಾಂ ಅಧಿವೇಶನದಲ್ಲಿ ಅನೇಕ ವಿಚಾರಗಳು ಪ್ರಸ್ತಾಪವಾಗ ಬೇಕಾಗಿರುವುದು ನಿಜ ಅದನ್ನು ನಾನು ಒಪ್ಪುತ್ತೇನೆ. ಎಲ್ಲಾ ವಿಚಾರಗಳ ಬಗ್ಗೆಯೂ ಸರ್ಕಾರವು ಮುಕ್ತವಾಗಿದೆ. ಈ ಬಗ್ಗೆ ತಾವು ಯೋಚನೆಯನ್ನು ಮಾಡಿ. ತಾವು ಅತ್ಯಂತ ಹಿರಿಯ ಸದಸ್ಯರಾಗಿದ್ದೀರಿ. ತಾವು preliminary submission ಮಾಡುವಾಗ ತಮ್ಮ ಸದಸ್ಯರು ಸದನದ ಬಾವಿಯಲ್ಲಿ ರುತಾರೆಂದರೆ ಇದು ಸರಿಯಾಗುತ್ತದೆಯೇ? ಮಾನ್ಯ ಅಧ್ಯಕ್ಷರೆ, ತಾವು ಸಭೆ ಯನ್ನು orderನಲ್ಲಿ ತಂದು ತದನಂತರ ಯಾವ ರೀತಿಯಾಗಿ ಬೇಕಾದರೂ submission ಮಾಡಲಿ. ಇಲ್ಲಿ ಎಲ್ಲರ importance ಅನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ.

(ಈ ಹಂತದಲ್ಲಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ತಮ್ಮ ಸ್ಥಾನಕ್ಕೆ ತೆರಳಿದರು.)

**ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):** ಮಾನ್ಯ ಅಧ್ಯಕ್ಷರೆ, ನಾವು ನಿಮ್ಮ ಮನಸ್ಸಿಗೆ ನೋವು ಮಾಡಬೇಕೆಂದು ಏನೂ ಇಲ್ಲ. ತಾವು ಹಿರಿಯ ಸದಸ್ಯರಾಗಿದ್ದೀರಿ. ಬಹಳ ಅನುಭವಿಗಳಿದ್ದೀರಿ, ನೀವು ಸನ್ಮಾನ್ಯ ಅಧ್ಯಕ್ಷರಾಗಿ ದ್ದೀರಿ, ನಿಮ್ಮ ಆದೇಶದ ಪ್ರಕಾರ ನಾವು ನಡೆದುಕೊಳ್ಳಬೇಕು. ನೀವು ಏನು ಆದೇಶವನ್ನು ಕೊಡುತ್ತೀರೋ ಅದಕ್ಕೆ ನಾವುಗಳು ತಲೆಬಾಗಬೇಕು. ಇದು ಸದನದಲ್ಲಿ ನಡೆದುಕೊಂಡು ಬಂದಿರುವಂತಹ ಸಂತೃಪ್ತಿದಾಯವಾಗಿದೆ.ನಾನು

ತಮ್ಮಲ್ಲಿ ಇಷ್ಟೇ ಹೇಳುವುದಕ್ಕೆ ಇಚ್ಛೆಪಡುತ್ತೇನೆ ನಾನು ನಿಲುವಳಿ ಸೂಚನೆಯನ್ನು 9.45 ಗಂಟೆಗೆ ಕಳುಹಿಸಿಕೊಟ್ಟಿದ್ದೇನೆ. ಅದಕ್ಕೆ signature ಮಾಡಿ ಕಳುಹಿಸಿಕೊಟ್ಟಿದ್ದಾರೆ ಇಲ್ಲಿ ನಾನು ಎರಡು ವಿಷಯದ ಬಗ್ಗೆ ಪ್ರಸ್ತಾಪ ಮಾಡುವವನಿದ್ದೇನೆ ಈ ಕಾರ್ಯಕಲಾಪಕ್ಕೆ ಅಡ್ಡಿ ಮಾಡಬೇಕೆಂದು ಏನೂ ಇಲ್ಲ. ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಮಾನ್ಯ ಪ್ರತಿಪಕ್ಷದ ನಾಯಕರು ಚರ್ಚೆ ಮಾಡುವವರಿದ್ದಾರೆ. ನಾನು ಕಳೆದ 25 ದಿವಸಗಳ ಕಾಲ ಯಾರು ಒಪ್ಪುತ್ತಾರೋ ಬಿಡುತ್ತಾರೋ ಶಾದಿಭಾಗ್ಯ ಯೋಜನೆಯ ಕೇವಲ ಕೆಲವರಿಗೆ ಮಾತ್ರ ಮೀಸಲಿರಬಾರದು, ಇದು ಎಲ್ಲಾ ವರ್ಗದವರಿಗೂ ಕೊಡಬೇಕೆಂದು ಹೇಳಿದ್ದೇನೆಯೇ ಹೊರತು ನಾನು ಅಲ್ಪಸಂಖ್ಯಾತ ವರ್ಗದವರ ವಿರೋಧಿಗಳಲ್ಲ. ನಾನು ಮುಖ್ಯಮಂತ್ರಿಯಾಗಿದ್ದಾಗಲೂ ಸಹ ಸಂಧ್ಯಾ ಸುರಕ್ಷಾ ಭಾಗ್ಯಲಕ್ಷ್ಮಿ ಯೋಜನೆ ಇರಬಹುದು. . . .

**ಅಧ್ಯಕ್ಷರು:** ನೀವು ವಿಷಯಕ್ಕೆ ಬರಬೇಡಿ ನೀವು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದರ ಬಗ್ಗೆ ಮಾತನಾಡಿ. ಈಗ ನಾನು ತಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಆಗ ತಾವು ಎಲ್ಲಾ ವಿಷಯವನ್ನು ಬಿಡಿಸಿ ಹೇಳಿ.

**ಶ್ರೀ ಬಿ.ಎಸ್ ಯಡಿಯೂರಪ್ಪ:** ಮಾನ್ಯ ಅಧ್ಯಕ್ಷರೆ, ನಾನು ನಿಮ್ಮಲ್ಲಿ ಇಷ್ಟೆ ವಿನಂತಿ ಮಾಡಿಕೊಳ್ಳುತ್ತೇನೆ. ನಾನು 25 ದಿವಸಗಳ ಕಾಲ ಸತ್ಯಾಗ್ರಹ ಮಾಡುವಾಗ ಸರ್ಕಾರವು ಸ್ಪಂದಿಸಲಿಲ್ಲ. ನಾನು ರಾಜ್ಯದ ಜನರಿಗೆ ಹಗಲು ಮತ್ತು ರಾತ್ರಿ ಇಲ್ಲಿ ಸತ್ಯಗ್ರಹವನ್ನು ಮಾಡುತ್ತೇನೆಂದು ಅದನ್ನು ಮುಂದುವರಿಸುವುದಕ್ಕೆ ಇಲ್ಲಿಗೆ ಬಂದಿದ್ದೇನೆ. ರಾಜ್ಯದ ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚೆಯಾಗಬೇಕಾಗಿದೆ. ಪ್ರತಿಪಕ್ಷದ ನಾಯಕರಿಗೆ ಮತ್ತು ಆಡಳಿತ ಪಕ್ಷದವರಿಗೆ ತೊಂದರೆಯಾಗಬಾರದು. ನಮ್ಮ ಎಲ್ಲಾ ಸದಸ್ಯರನ್ನು ಬೇರೆ ಎಲ್ಲಾ ಕಾರ್ಯಕಲಾಪದಲ್ಲಿ ಭಾಗವಹಿಸಬೇಕೆಂದು ವಿನಂತಿ ಮಾಡುತ್ತೇನೆ ಅವರೆಲ್ಲರೂ ಕೂಡ ಅವರವರ ಸೀಟ್‌ಗೆ ಬರುತ್ತಾರೆ. ನಾನು ಹಗಲು ಮತ್ತು ರಾತ್ರಿ ಈ ಅಧಿವೇಶನವು ಮುಗಿಯುವವರೆಗೂ ನನ್ನ ಬೇಡಿಕೆಗೆ ಸ್ಪಷ್ಟವಾದ ಉತ್ತರ ಬರುವವರೆಗೆ

ಇಲ್ಲಿ ಸತ್ಯಾಗ್ರಹ ಮಾಡುವುದಕ್ಕೆ ಮತ್ತು ಧರಣಿ ಕುಳಿತುಕೊಳ್ಳುವುದಕ್ಕೆ ನನಗೆ ಏನು ಎರಡು ಪ್ರಮುಖವಾದ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ?

**ಅಧ್ಯಕ್ಷರು:** ಇದನ್ನು ಯಾರಾದರೂ ಶಾಸನ ಸಭೆಯಲ್ಲಿ ತೀರ್ಮಾನ ವನ್ನು ಮಾಡುತ್ತಾರೆಯೇ? ಹಿಂದೆ ಮಾಡಿದ್ದಾರೆಯೇ?

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ:** ನಾನು ನಮ್ಮ ಪಕ್ಷದ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ. ನಮ್ಮ ಐದು ಜನ ಸದಸ್ಯರು ಈ ಸದನದ ಕಾರ್ಯ ಕಲಾಪದಲ್ಲಿ ಭಾಗವಹಿಸುತ್ತಾರೆ. ಸದನದಲ್ಲಿ ಹಗಲು ರಾತ್ರಿ ಸತ್ಯಾಗ್ರಹ ಮಾಡ ಲಿಕ್ಕೆ, ಧರಣಿ ಕುಳಿತುಕೊಳ್ಳುವುದಕ್ಕೆ ನನಗೆ ವ್ಯವಸ್ಥೆ ಮಾಡಿಕೊಡಿ.

(ಗೊಂದಲ)

(ಈ ಹಂತದಲ್ಲಿ ಕೆ.ಜೆ.ಪಿ ಪಕ್ಷದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರು ಸದನದ ಬಾವಿಯಲ್ಲಿ ಕುಳಿತು ಧರಣಿ ಮಾಡುತ್ತಿದ್ದರು)

**ಶ್ರೀ ಟಿ.ಬಿ.ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಸನ್ಮಾನ್ಯ ಯಡಿಯೂರಪ್ಪನವರು ಶಾದಿ ಭಾಗ್ಯ ಯೋಜನೆ ಬಗ್ಗೆ ಹೇಳುತ್ತಿದ್ದಾರೆ, ಅಂತಹ ಹೆಸರು ಯಾವುದೂ ನಮ್ಮ ಹತ್ತಿರ ಇಲ್ಲ. ಅವರು ವಿಚಾರ ಪ್ರಸ್ತಾಪ ಮಾಡುತ್ತಿದ್ದಾರೆಂದು ನಮಗೆ ಅರ್ಥವಾಗು ತ್ತಿಲ್ಲ.

**ಅಧ್ಯಕ್ಷರು:** ಕಾನೂನು ಸಚಿವರೇ, ವಿರೋಧಪಕ್ಷದ ಉಪನಾಯಕರಾಗಿ ಶ್ರೀ ವೈ.ಎಸ್.ವಿ.ದತ್ತರವರನ್ನು ನೇಮಿಸಲಾಗಿದೆ ಎಂದು ನಾನು ಘೋಷಣೆ ಮಾಡಿದ್ದೇನೆ.

ಈಗ ಸದನವನ್ನು ಮುಂದೂಡಿ ಭೋಜನ ವಿರಾಮದ ನಂತರ ಪುನಃ ಮಧ್ಯಾಹ್ನ 2.30 ಗಂಟೆಗೆ ಸೇರೋಣ.

(ಸದನವನ್ನು ಮಧ್ಯಹ್ನ 1.41 ಗಂಟೆಗೆ ಭೋಜನಕ್ಕೆ ಮುಂದೂಡಿ ಪುನಃ 2.30 ಗಂಟೆಗೆ ಸೇರಲು ನಿರ್ಣಯಿಸಲಾಯಿತು)

ಸದನವು ಭೋಜನ ವಿರಾಮದ ನಂತರ ಅಪರಾಹ್ನ 02 ಗಂಟೆ 46 ನಿಮಿಷಕ್ಕೆ ಸಮಾವೇಶಗೊಂಡಿತು.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಈ ಹಂತದಲ್ಲಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ಸದನದ ಬಾವಿಯೊಳಗೆ ಬಂದು ನೆಲ ಹಾಸಿನ ಮೇಲೆ ಧರಣಿ ಕುಳಿತುಕೊಂಡರು, ನಂತರ ಶ್ರೀ ಬಿ.ಶ್ರೀರಾಮುಲುರವರು ಅವರ ಜೊತೆಯಲ್ಲಿ ಕುಳಿತರು.)

## 6. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

**ಅಧ್ಯಕ್ಷರು:** ಈಗ ಪ್ರಶ್ನೋತ್ತರ ಶ್ರೀ ಕೆ ಗೋಪಾಲಯ್ಯನವರ ಪ್ರಶ್ನೆ

**ಶ್ರೀ ಕೆ.ಗೋಪಾಲಯ್ಯ (ಮಹಾಲಕ್ಷ್ಮಿ ಲೇಔಟ್):** ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಸಂಖ್ಯೆ 121 ನ್ನು ಮಾನ್ಯ ಕಾರ್ಮಿಕ ರಾಜ್ಯ ಸಚಿವರಲ್ಲಿ ಕೇಳುತ್ತಿದ್ದೇನೆ.

**ಶ್ರೀ ಪಿ.ಬಿ ಪರಮೇಶ್ವರ ನಾಯ್ಕ (ಕಾರ್ಮಿಕ ರಾಜ್ಯ ಸಚಿವರು):** ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಲಾಗಿದೆ.

**ಶ್ರೀ. ಕೆ. ಗೋಪಾಲಯ್ಯ (ಮಹಾಲಕ್ಷ್ಮೀ ಲೇ ಔಟ್) :** ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಬೆಂಗಳೂರು ನಗರದಲ್ಲಿರುವ ಹೋಟೆಲ್ ಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು,

ಆ) ಎಷ್ಟು ಹೋಟೆಲ್ ಕಾರ್ಮಿಕರಿಗೆ ಕಾರ್ಮಿಕ ಕಾನೂನಿನ್ವಯಪ್ರಾವಿಡೆಂಟ್ ಫಂಡ್, ಇ.ಎಸ್.ಐ ಹಾಗೂ ಇತರ ಸೌಲಭ್ಯ ಗಳನ್ನು ನೀಡಲಾಗುತ್ತಿದೆ;